
ಓಂ ಶ್ರೀ ಗುರು ಬಸವಲಿಂಗಾಯ ನಮಃ
866666

ಕಲ್ಯಾಣ ಕಿರಣ

ಜುಲೈ 2017

ಶರಣರ ನಡೆ ಮುಕ್ತಿಯ ಕಡೆ



ಬೆಲೆ: 20/-

http://kalyanakirana.over-blog.com/ ಬ್ಲಾಗ್‌ನಲ್ಲಿ



ಬಸವ ಗಂಗೋತ್ರಿಯಲ್ಲಿ ಬಸವೋತ್ಸವದ ಸಿಹಿ ಕ್ಷಣಗಳು



ಜಯತು ಜಯ ಬಸವ ಲಿಂಗ ಶರಣ ಸಾರ್ವಭೌಮನೆ

ಜಯತು ಜಯ ಬಸವ ಲಿಂಗ ಶರಣ ಸಾರ್ವಭೌಮನೆ
ಜಯತು ಜಯ ಮಂಗಳಾಂಗ ಲಿಂಗದೇವ ಕಂದನೆ ॥ಪ॥

ಕರ್ತ ಕಳುಹೆ ಧರೆಗೆ ಬಂದು ಮರ್ತ್ಯರನ್ನು ಪೊರೆದ ಗುರು
ಕರ್ತನಾಗಿ ಲಿಂಗಾಯತ ಧರ್ಮ ಕೊಟ್ಟ ಕಲ್ಪತರು
ಬಾಗೇವಾಡಿಯಲ್ಲಿ ಜನಿಸಿ ಸಂಗಮದೊಳು ಅಭ್ಯಸಿಸಿ
ಕಲ್ಯಾಣ ಪ್ರಣತೆಯಲ್ಲಿ ಬೆಳಗಿ ವಿಶ್ವಜ್ಯೋತಿಯಾದೆ ॥೧॥

ದೇವನೊಬ್ಬ ಸೃಷ್ಟಿಕರ್ತ ಪರಮೋನ್ನತ ಎಂದೆಯ್ಯೆ
ಕಾಕು ಪೋಕು ದೈವಂಗಳ ಪೂಜೆ ಖಂಡಿಸಿ ತೋರೆದೆಯ್ಯೆ
ದೇವನವನ ಪೂಜಿಸಲು ಇಷ್ಟಲಿಂಗವಿತ್ತೆಯ್ಯೆ
ಧರ್ಮಕರ್ತನಾಗಿ ಪ್ರೀತಿ ಎಲ್ಲರಿಗೂ ನೀಡ್ದೆಯ್ಯೆ ॥೨॥

ಅನುಭವ ಮಂಟಪವ ಕಟ್ಟಿ ಎಲ್ಲರನ್ನು ಕರೆದೆಯ್ಯೆ
ಅನುಭಾವವೇ ದೇವನನೊಲಿಪ ಸಾಧನವೆಂದು ನುಡಿದೆಯ್ಯೆ
ಕಾಯಕವೇ ಕೈಲಾಸ ಸೂತ್ರವಿತ್ತ ದಿವ್ಯಯೋಗಿ
ದಾಸೋಹವೇ ದೇವಧಾಮ ಎಂದು ಸವೆದ ಮಹಾತ್ಯಾಗಿ ॥೩॥

ಇವನು ಯಾರು ಎಂದು ಭೇದ ಗೈದವರನು ಜರಿದ ಪುರುಷ
ಇವ ನಮ್ಮವ ಎಂದು ಎಲ್ಲರ ಆದರಿಸಿದ ಗುರು ಪರುಷ
ಧರ್ಮದಾತ ಶರಣ ಪ್ರೀತ ಇಷ್ಟಲಿಂಗದಾತನೇ
ವಿಶ್ವಧರ್ಮ ನೀಡಿ ಮೆರೆದ ಸಚ್ಚಿದಾನಂದ ಕಂದನೆ ॥೪॥

– ಮಾತಾಜಿ

ಎಲ್ಲ ಬಲ್ಲಿದನಯ್ಯಾ ಕಲ್ಯಾಣ ಬಸವಯ್ಯ
ಚೆಲ್ಲಿದನು ತಂದು ಶಿವ ಬೆಳಕ । ನಾಡೊಳಗೆ
ಸೊಲ್ಲೆತ್ತಿ ಜನವು ಹಾಡುವುದು ॥

ಉತ್ತಿ ಬಿತ್ತುವ ಮಂತ್ರ ಬಿತ್ತಿ ಬೆಳೆಯುವ ಮಂತ್ರ
ಸತ್ಯ ಶಿವಮಂತ್ರ ನಿನ್ಹೆಸರು । ಬಸವಯ್ಯ
ಮರ್ತ್ಯದೊಳು ಮಂತ್ರ ಜೀವನಕೆ ॥

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥
866666

ಸಂಪುಟ-49	ಬಸವ ಶಕೆ -884	ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ- 07	ಜುಲೈ-2017	ವಾರ್ಷಿಕ ಚಂದಾ 200 ರೂ.

● ಕಿರಣ ಗನ್ನಡಿ ●

ಜುಲೈ ತಿಂಗಳಲ್ಲಿ ಬರುವ ಹಬ್ಬ ಹುಣ್ಣಿಮೆ

ಶ್ರಾವಣಮಾಸದ ಬಸವಜ್ಯೋತಿ ಆರಂಭ	-	ಜುಲೈ-24
ನೀಲಾಂಬಿಕಾ ಷಷ್ಠಿ(ಲಿಂಗೈಕ್ಯ ಸಂಸ್ಮರಣೆ)	-	ಜುಲೈ-29
ಬಸವ ಪಂಚಮಿ(ಲಿಂಗೈಕ್ಯ ಸಂಸ್ಮರಣೆ)	-	ಜುಲೈ-30

alyana Kirana -Reg No.19988/70. Monthly Magazine Edited nd Published by Pujya Mate Kasturidevi on behalf of Vishwa alyana Mission Charitable Trust, Basava Mantapa, 2035, 20th lain, Basava Mantapa Road, 2nd Block, Rajajinagar, Bengaluru-60010. Phone : 080-23131476, Send SMS to 9945806297 mail-kalyana.kirana1134@gmail.com

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥
866666

ವಿಶ್ವಗುರು ಬಸವಣ್ಣನವರ
822ನೇ ಲಿಂಗೈಕ್ಯ ಸಂಸ್ಮರಣೆ



30-07-2017, ದೇವ(ಭಾನು)ವಾರ,
ಬೆಳಿಗ್ಗೆ 10.30ಕ್ಕೆ

ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಪ್ರದೇಶದಲ್ಲಿರುವ

ಪುಟ್ಟಣ್ಣಚೆಟ್ಟಿ ಪುರಭವನ (ಟೌನ್‌ಹಾಲ್)ದಲ್ಲಿ

ಶರಣರ ಬರುವೆಮಗೆ ಪ್ರಾಣ ಜೀವಾಳ

ವಿಶ್ವಗುರು ಬಸವಣ್ಣನವರು ಮತ್ತು ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರ 822ನೆಯ ಲಿಂಗೈಕ್ಯ ದಿನಾಚರಣೆ

ಸ್ಥಳ: ಪುಟ್ಟಣ್ಣಚೆಟ್ಟಿ ಪುರಭವನ (ಟೌನ್‌ಹಾಲ್), ಸಿಟಿ ಮಾರುಕಟ್ಟೆ, ಬೆಂಗಳೂರು
ದಿ.30-7-2017, ಭಾನು(ದೇವ)ವಾರ, ಬೆಳಿಗ್ಗೆ .10-30

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ (30-4-1134) 62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ಮಂಗಳ (ಬಸವ)ವಾರದಂದು ದಿ. 30-7-1196ರಂದು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆತ ನದಿಯಂತೆ ಲಿಂಗೈಕ್ಯರಾಗಿ ದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು **"ಬಸವ ಪಂಚಮಿ"** ಎಂದು ಖ್ಯಾತಿವೆತ್ತಿದೆ. ಈ ವರ್ಷ 822ನೆಯ ಲಿಂಗೈಕ್ಯ ದಿನವು ಶುಕ್ರ(ಮಾತೃ)ವಾರ, ದಿ.28-7-2017ರಂದು ಒದಗಿ ಬಂದಿದೆ. ಆದಿ ಪ್ರಮಥ, ಗಣಾಧಿಪತಿ ಬಸವಣ್ಣನವರು ಲಿಂಗೈಕ್ಯರಾದ ಮರು ದಿವಸ ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರು ಸಹ ಉರಿಯುಂಡ ಕರ್ಪುರದಂತೆ ಲಿಂಗೈಕ್ಯರಾದರು. ಅವರ 822ನೆಯ ಲಿಂಗೈಕ್ಯ ಸಂಸ್ಮರಣೆಯನ್ನು ಸಹ ಆಚರಿಸ ಲಾಗುತ್ತಿದೆ. ಪವಿತ್ರ ಹಬ್ಬಗಳಾದ ಬಸವ ಪಂಚಮಿ ಮತ್ತು ನೀಲಾಂಬಿಕಾ ಷಷ್ಠಿಯನ್ನು ಭಕ್ತಿ ಪೂರ್ವಕವಾಗಿ ಆಚರಿಸಬೇಕಾದುದು ನಮ್ಮೆಲ್ಲರ ಕರ್ತವ್ಯ.

*ಶುಕ್ರ (ಮಾತೃ)ವಾರ, ದಿ.28-7-2017ರಂದು ಬೆಳಿಗ್ಗೆ 8ರಿಂದ ಶ್ರೀ ಬಸವ ಪುತ್ಥಳಿಗೆ ವಿಶೇಷ ಪೂಜೆ ಮತ್ತು ಸಹಸ್ರ ಮಂತ್ರ ಪಠಣ. ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರಿಂದ.

* ಶನಿ (ಶರಣ)ವಾರ, ದಿ.29-7-2017ರಂದು ಬೆಳಿಗ್ಗೆ 10-30ರಿಂದ ನೀಲಾಂಬಿಕಾ ಷಷ್ಠಿಯ ನಿಮಿತ್ತ ಬಸವ ಮಂಟಪದಲ್ಲಿ ಸಾಮೂಹಿಕ ಇಷ್ಟಲಿಂಗಪೂಜೆ.

* ಭಾನು(ದೇವ)ವಾರ, ದಿ.30-7-2017ರಂದು ಬಸವ ಪಂಚಮಿ ನಿಮಿತ್ತ ಕೆ.ಪಿ.ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ 10-30ರಿಂದ ಸಭಾ ಕಾರ್ಯಕ್ರಮ.

ವಚನ ನೃತ್ಯ ರೂಪಕ

ಅತ್ಯಂತ ವಿಶೇಷವಾದ ವಚನ ನೃತ್ಯ ರೂಪಕಗಳನ್ನು ಏರ್ಪಡಿಸಲಾಗುವುದು. ವೈಭವಯುತವೂ ಅರ್ಥಗರ್ಭಿತವೂ ಆದ ನೃತ್ಯ ರೂಪಕಗಳು ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಲಿವೆ.

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಈ ಮೂರು ದಿನಗಳ ಕಾರ್ಯಕ್ರಮವನ್ನು, ಉಪನ್ಯಾಸ ಮತ್ತು ನಂತರ ಗಣ ಪ್ರಸಾದ (ಭೋಜನ)ವನ್ನು ವ್ಯವಸ್ಥೆ ಮಾಡಿದೆ. ಆದ್ದರಿಂದ ಎಲ್ಲಾ ಶರಣ ಬಂಧುಗಳು ಕುಟುಂಬ ಪರಿವಾರ ಸಹಿತವಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಈ ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ಅಲ್ಲದೆ ತನು-ಮನ-ಧನಗಳಿಂದ ಸಹಕರಿಸಿ ಕಾರ್ಯಕ್ರಮ ವ್ಯವಸ್ಥೆ ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ವಿನಂತಿಸುತ್ತೇವೆ.

ನೀಲಾಂಬಿಕಾ ಷಷ್ಠಿ - ದಿ.29-7-2017ರಂದು ರಾಜಾಜಿನಗರದ ಬಸವ ಮಂಟಪದಲ್ಲಿ

ಪರಮ ದಾಸೋಹವನು ನೆರೆ ಮಾಡಿ ಜಂಗಮದ
ಪರಮ ಪ್ರಸಾದವನು ಸವಿದು ಸುಖದಿ ಕರದಿಷ್ಟಲಿಂಗದೊಳು ಶರೀರವನಿಂಬಿಟ್ಟ
ಕರುಣೆ ನೀಲಮ್ಮ ಶರಣು ಯೋಗಿನಾಥ

ತಾಯಿ ನೀಲಾಂಬಿಕೆಯವರು ಅಸಾಮಾನ್ಯ ಯೋಗಿಣಿ. ಇಚ್ಛಾಮರಣೆಯಾಗಿ ಶ್ರೀ ಗುರು ಬಸವಣ್ಣನವರು ಲಿಂಗೈಕ್ಯರಾದ ಮರುದಿವಸ ಅವರು ಕರದಿಷ್ಟ ಲಿಂಗದ ಪೂಜೆ ಮಾಡುತ್ತ ಲಿಂಗೈಕ್ಯರಾದರು. ಈ ನಿಮಿತ್ತ ದಿ. 29-7-2017ರಂದು 822ನೆಯ ನೀಲಾಂಬಿಕಾ ಷಷ್ಠಿಯನ್ನು ಬೆಳಿಗ್ಗೆ 10-30 ರಿಂದ ಬೆಂಗಳೂರಿನ ರಾಜಾಜಿನಗರದ ಬಸವ ಮಂಟಪದಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆಯೊಡನೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಸನ್ನಿಧಿಯಲ್ಲಿ ಆಚರಿಸಲಾಗುತ್ತಿದೆ. ಪೂಜಾ ಸಾಮಗ್ರಿಗಳೊಡನೆ ಬಂದು ಶರಣರು ಭಾಗವಹಿಸಬೇಕು.

ಪರ ಊರುಗಳಿಂದ ಬರುವವರಿಗೂ ಸಹ ಬಸವ ಮಂಟಪದಲ್ಲಿ ವಸತಿ-ಊಟದ ವ್ಯವಸ್ಥೆ ಇರುವುದರಿಂದ ಆಗಮಿಸಿ ಬಸವ ಪಂಚಮಿ ಉತ್ಸವದಲ್ಲಿ ಭಾಗಿಗಳಾಗಲು ಕೋರುತ್ತೇವೆ. ಬಸ್ಸುಗಳಲ್ಲಿ ಬರುವವರು ರಾಜಾಜಿನಗರದ ನವರಂಗ್ ಟಾಕೀಸ್ ಬಳಿ ಇಳಿದರೆ ಬಸವ ಮಂಟಪವನ್ನು 10 ನಿಮಿಷದಲ್ಲಿ ತಲುಪಬಹುದು, ಬಸವ ಮಂಟಪವು ರಾಜಾಜಿನಗರದ 2ನೆಯ ಬ್ಲಾಕಿನಲ್ಲಿ 20ನೆಯ ಮುಖ್ಯರಸ್ತೆಯಲ್ಲಿ (ಸಿಟಿ ಆಸ್ಪತ್ರೆ ಪಕ್ಕ) ಇದೆ.

ವಿಶೇಷ ಮನವಿ :- ಸಾಮಾನ್ಯವಾಗಿ ಅನೇಕರು ಭಾನುವಾರಗಳನ್ನು ಶರಣರ ಜಯಂತಿ , ಲಿಂಗೈಕ್ಯ ಸಂಸ್ಮರಣೆ ಮಾಡಲು ಆಯ್ಕೆ ಮಾಡಿಕೊಳ್ಳುತ್ತಾರೆ. ಮಹಾನುಭಾವರಿಗೆ ಗೌರವ ತೋರಿಸಲು ನಾವು ಅಂದಂದೇ ಮಾಡಬೇಕು. ಒಂದು ರಜೆಯನ್ನು ಸಹ ಹಾಕಲಾರದ ಮನೋಭಾವ ಸರಿಯಲ್ಲ; ಅಂದು ಒಂದು ದಿವಸವಾದರೂ ಅಂಗಡಿ ಮುಚ್ಚಿ ಮಹಾತ್ಮರಿಗೆ ಗೌರವ -ಕೃತಜ್ಞತೆ ಸಲ್ಲಿಸಬೇಕು ಎಂಬ ಮನೋಭಾವ ಹೊಂದದೆ ಇರುವುದು ಸೂಕ್ತವಲ್ಲ. ಧರ್ಮಕ್ಕಾಗಿ ತನು-ಮನ-ಧನಗಳನ್ನು ಮಾತ್ರವಲ್ಲದೆ ಅಭಿಮಾನ- ಸಮಯ- ಪ್ರಾಣಗಳನ್ನೂ ಮೀಸಲಿಡಬೇಕು. ಬಸವ ಪಂಚಮಿ ಶುಕ್ರವಾರ ಬಂದಿದ್ದು ರಜಾದಿನ ಅಲ್ಲದಿದ್ದರೂ ಹೆಚ್ಚಿನ ಸಂಖ್ಯೆಯಲ್ಲಿ ಸಹೃದಯರು ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಕೋರುತ್ತೇವೆ.

ಹಾಲು ಹಣ್ಣು ವಿತರಣೆ

ನಾಗರ ಪಂಚಮಿ ಎಂದು ಹುತ್ತಕ್ಕೆ, ನಾಗರ ಕಲ್ಲಿಗೆ ಹಾಲು ಎರೆಯುವ ಮೂಢ ಸಂಪ್ರದಾಯ ಬಿಟ್ಟು ಮಾನವೀಯ ಕಾರ್ಯಕ್ಕೆ ಅದನ್ನು ಬಳಸಬೇಕೆಂದು ರಾಷ್ಟ್ರೀಯ ಬಸವ ದಳದ ವತಿಯಿಂದ ಆಸ್ಪತ್ರೆಗಳಲ್ಲಿ ಹಣ್ಣು- ಹಾಲು ವಿತರಿಸುವ ಕಾರ್ಯಕ್ರಮವನ್ನು ಸಂಯೋಜಿಸಲಾಗಿದೆ.

ಬಸವ ಮಂಟಪಕ್ಕೆ ಬಸ್ ಮಾರ್ಗ
ಮೆಜೆಸ್ಟಿಕ್‌ನಿಂದ
251,80ಎ, 265, 80ಇ
ರೂಟಿನ ಸಿಟಿ ಬಸ್ಸುಗಳು ಬರುತ್ತವೆ.

ಕಾರ್ಯಕ್ರಮ ವ್ಯವಸ್ಥಾಪಕರು :
ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೆಯ ಮೇನ್
2ನೆಯ ಬ್ಲಾಕು, ರಾಜಾಜಿನಗರ,
ಬೆಂಗಳೂರು-560010

ಸಂಪಾದಕೀಯ



ಲಿಂಗಾಯತ ಧರ್ಮಕ್ಕೆ ಕಾಲ್ತೊಡಕು ವೀರಶೈವ ಮಹಾಸಭೆ

ದಿ. 14-6-2017 ರಂದು ಅಖಿಲ ಭಾರತ ವೀರಶೈವ ಮಹಾಸಭೆಯವರು ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರಿಗೆ ಸನ್ಮಾನವನ್ನು ಇಟ್ಟುಕೊಂಡಿದ್ದರು, ಸನ್ಮಾನ ಸ್ವೀಕರಿಸಿದ ಶ್ರೀಸಿದ್ದರಾಮಯ್ಯನವರು "ನೀವು ಒಮ್ಮತಕ್ಕೆ ಬಂದು ನಿರ್ಣಯವನ್ನು ತಿಳಿಸಿರಿ. ಸಚಿವ ಸಂಪುಟದಲ್ಲಿ ನಿರ್ಣಯವನ್ನು ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ಇದು ಸ್ವತಂತ್ರ ಧರ್ಮ ಎಂದು ಪ್ರಸ್ತಾವನೆ ಸಲ್ಲಿಸುವ" ಎಂದಿದ್ದಾರೆ. ಆಗ ಪುಸಕ್ಕನೆ ಬಾಯಿ ಹಾಕಿದ ಪೌರಾಡಳಿತ ಸಚಿವ ಶ್ರೀ ಈಶ್ವರ ಖಂಡ್ರೆ, "ವೀರಶೈವ-ಲಿಂಗಾಯತ ಎಂದು ಶಿಫಾರಸ್ಸು ಮಾಡಿರಿ" ಎಂದು ಹೇಳಿದ್ದಾರೆ. ಅಂದಿನಿಂದ ಪುನಃ ವೀರಶೈವ ಮತ್ತು ಲಿಂಗಾಯತ ಎಂಬ ಚರ್ಚೆ ಶುರುವಾಗಿದೆ. ಈ ಮಧ್ಯೆ ವೈದಿಕ ಧರ್ಮದ ಕಟ್ಟಾ ಅನುಯಾಯಿ ಮತ್ತು ಅಭಿಮಾನಿ ಆಗಿರುವ ಡಾ|| ಚಿದಾನಂದ ಮೂರ್ತಿಯವರು ದಿ.21-6-2017 ರಂದು ಪತ್ರಿಕಾಗೋಷ್ಠಿಯಲ್ಲಿ "ವೀರಶೈವವೂ ಹಿಂದು ಧರ್ಮದ ಭಾಗ" ಎಂದು ಹೇಳಿಕೆ ಕೊಟ್ಟಿದ್ದಾರೆ.

ಹಾನಗಲ್ ಶ್ರೀಕುಮಾರ ಸ್ವಾಮಿಯವರು ದುರದ್ದೇಶದಿಂದ ಹುಟ್ಟು ಹಾಕಿದ ವೀರಶೈವ ಮಹಾಸಭೆ ಲಿಂಗಾಯತ ಧರ್ಮ ಮತ್ತು ಸಮಾಜಗಳನ್ನು ಶನಿಯಂತೆ ಕಾಡುತ್ತ ಬರುತ್ತಿದೆ. ತಮಗೆ ಸಂಬಂಧವಿಲ್ಲದ ವೀರಶೈವ ಎಂಬ ಬೋರ್ಡನ್ನು ಲಿಂಗಾಯತರಿಗೆ ನೇತು ಹಾಕುವ ಸಂಚನ್ನು ಮಾಡುತ್ತಲೇ ಬರುತ್ತಿದೆ. ಟಿವಿಯ ಮೂಲಕ ನಡೆದ ಒಂದು ಚರ್ಚೆಯಲ್ಲಿ ವೀರಶೈವ - ಲಿಂಗಾಯತ ಪಂಚಮಸಾಲೆ ಸಂಘ ಹುಟ್ಟು ಹಾಕಿದೆ. ಬಸವರಾಜ ದಿಂಡೂರು ಎಂಬುವವರು ಇವೆರಡು ಒಂದೇ ಉತ್ತರ ಕರ್ನಾಟಕದಲ್ಲಿ ಲಿಂಗಾಯತ ಬಳಸುತ್ತಾರೆ. ಹಳೇ ಮೈಸೂರಲ್ಲಿ ಅದಕ್ಕೆ ವೀರಶೈವ ಎನ್ನುತ್ತಾರೆ ಎಂದರು. ಇದು ಹಾಸ್ಯಾಸ್ಪದ ವಿವರಣೆ. ಲಿಂಗಾಯತ ಮತ್ತು ವೀರಶೈವದ ವ್ಯಾಖ್ಯಾನವೇ ಅವುಗಳ ರೂಪುರೇಷೆಯನ್ನು ವಿವರಿಸುತ್ತದೆ. ಇದು ಹೇಗೆ ಎಂದರೆ ಕ್ರೈಸ್ತ ಮತ್ತು ಇಸ್ಲಾಂ ಒಂದೇ; ಜೈನ ಮತ್ತು ಬೌದ್ಧ ಒಂದೇ ಎಂಬಂತಿದೆ. ಏಸುಕ್ರಿಸ್ತರಿಂದ ಬಂದುದು ಕ್ರೈಸ್ತ ಧರ್ಮ ಮೊಹಮ್ಮದ ಪೈಗಂಬರರನ್ನು ಕಡೆಯ ಪ್ರವಾದಿ ಎಂದು ಅವರ ವಾಣಿಯನ್ನು ಅಲ್ಲಹನ ಸಂದೇಶವೆಂದು ನಂಬುವುದು ಇಸ್ಲಾಂ ಧರ್ಮ. ಗೌತಮ ಬುದ್ಧನಿಂದ ಬಂದುದು ಬೌದ್ಧ ಧರ್ಮ. ತೀರ್ಥಂಕರರಿಂದ ಬಂದುದು ಜೈನ ಧರ್ಮ. ವೀರಶೈವದ ವ್ಯಾಖ್ಯಾನವೇನೆಂದರೆ "ಶಿವನಲ್ಲಿ ವೀರತಮವಾದ ಭಕ್ತಿಯನ್ನು ಉಳ್ಳವನು ಯಾರೋ ಅವನು ವೀರಶೈವ." ಸೃಷ್ಟಿಕರ್ತನಾದ ದೇವನನ್ನು ನಂಬಿ ಅವನನ್ನು ವಿಶ್ವದಾಕಾರದ ಇಷ್ಟಲಿಂಗ ರೂಪದಲ್ಲಿ

ಧರಿಸಿಕೊಂಡು ಪೂಜಿಸುವವ ಲಿಂಗಾಯತ. ವೀರಶೈವ ಶಿವಪೂಜಕ ಲಿಂಗಾಯತ ದೇವಪೂಜಕ. ವೀರಶೈವ ಮಹಾಸಭೆಯ ಸಂವಿಧಾನವನ್ನು ರಚಿಸುವಾಗ ಇದು ವೇದಾಗಮ ಶೃತಿ ಸ್ಮೃತಿ ಪುರಾಣಗಳಲ್ಲಿ ಉಕ್ತವಾದುದು ಎಂದು ಬರೆಯಲಾಗಿದೆ. ಲಿಂಗಾಯತವು ವೇದಾಗಮಗಳನ್ನು ಬದಿಗಿಟ್ಟು ವಚನ ಸಾಹಿತ್ಯದಲ್ಲಿ ಉಕ್ತವಾದುದಾಗಿದೆ.

ಎಮ್ಮ ವಚನದೊಂದು ಪಾರಾಯಣಕ್ಕೆ
ವ್ಯಾಸನದೊಂದು ಪುರಾಣ ಸಮಬಾರದಯ್ಯ
ಎಮ್ಮ ವಚನದ ನೂರೆಂಟರಧ್ಯಯನಕ್ಕೆ
ಶತರುದ್ರೀಯ ಯಾಗ ಸಮಬಾರದಯ್ಯ
ಎಮ್ಮ ವಚನದ ಸಾಸಿರ ಪಾರಾಯಣಕ್ಕೆ
ಗಾಯಿತ್ರಿ ಲಕ್ಷ ಜಪ ಸಮಬಾರದಯ್ಯ
ಕಪಿಲಸಿದ್ಧ ಮಲ್ಲಿಕಾರ್ಜುನ

ವೀರಶೈವವು ಶೈವದ ಒಂದು ಶಾಖೆ. ಲಿಂಗಾಯತವು ಸ್ವತಂತ್ರ ಹಾಗೂ ಸ್ವಾವಲಂಬಿಯಾದ ಧರ್ಮ "ವೀರಶೈವವು ಹಿಂದೂ ಧರ್ಮದ ಒಂದು ಭಾಗ" ಎಂಬ ಡಾ|| ಚಿ.ಮೂ ಅವರ ಮಾತು ನೂರಕ್ಕೆ ನೂರು ಸತ್ಯ. ಆದರೆ ಲಿಂಗಾಯತ - ವೀರಶೈವ ಎರಡು ಒಂದೇ ಎನ್ನುವುದು ಪೂರ್ವಾಗ್ರಹ ಪೀಡಿತವಾದ ಅಪ್ಪಟ ಸುಳ್ಳು. ಖ್ಯಾತ ಸಂಶೋಧಕರು ಎಂಬ ಓಬೀರಾಯನ ಕಾಲದ ಒಂದು ಬಿರುದಿನಿಂದ ಡಾ|| ಚಿ.ಮೂ ಆಗಾಗ ಎಚ್ಚರಗೊಂಡು ಸುಳ್ಳನ್ನು ಹೇಳುತ್ತಾರೆ. ವೈದಿಕ ಧರ್ಮದ ಪ್ರಭಾವದಲ್ಲಿ ಬದುಕುತ್ತಿರುವ ಅವರು ಆರ್‌ಎಸ್ ಎಸ್‌ನವರು ತಿದಿ ಒತ್ತಿದ ತಕ್ಷಣ ಉಸಿರಾಡುತ್ತಾರೆ. ಹಿಂದುವಾದಿಗಳಿಗೆ, ಆರ್‌ಎಸ್‌ಎಸ್ ನವರಿಗೆ ಲಿಂಗಾಯತ ಸಮಾಜದ ಮೇಲೆ ತುಂಬಾ ಪ್ರೇಮವಿದೆ. ಅವರನ್ನು ಹಿಂದು ಕಕ್ಷೆಯ ಹೊರಗೆ ಬಿಡಲು ಮನಸ್ಸಿಲ್ಲ. ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣ ರಾಜ್ಯಗಳಲ್ಲಿ ಇವರ ಸಂಖ್ಯೆ ಗಣನೀಯವಾಗಿದೆ. ನಮ್ಮ ಕಳವಳವೇನೆಂದರೆ ಸ್ವತಂತ್ರ ಧರ್ಮವಾಗಿ ಧರ್ಮ ಪೀಠವನ್ನು ಏರುವ ಸಾಮರ್ಥ್ಯವಿರುವ ಲಿಂಗಾಯತವು ಹಿಂದುದೊಳಗಣ ಒಂದು ಜಾತಿ (ಮತ, ಪಂಥ)ಯಾಗಿ ಊಳಿಗವನ್ನು ಮಾಡುತ್ತಿದೆ ಎಂಬುದು. ಲಿಂಗಾಯತ ಧರ್ಮವು ಸ್ವತಂತ್ರ ಧರ್ಮದ ಮಾನ್ಯತೆ ಪಡೆದ ಮಾತ್ರಕ್ಕೆ ಅದು ಹಿಂದು ಸಂಸ್ಕೃತಿಯ ವಿರೋಧಿಯಾಗದು. ಭಾರತ ದೇಶದಲ್ಲಿಯೇ ಹುಟ್ಟಿ ಸ್ವತಂತ್ರ ಧರ್ಮದ ಸ್ಥಾನಮಾನ ಅಲ್ಪ ಸಂಖ್ಯಾತರ ಸೌಲಭ್ಯ ಪಡೆದಿರುವ ಜೈನ, ಸಿಖ್, ಬೌದ್ಧ ಧರ್ಮಗಳು ಹಿಂದು ವಿರೋಧಿ ಅಲ್ಲ, ಭಾರತದ ವಿರೋಧಿಗಳಲ್ಲ. ವಿಶ್ವಗುರು ಬಸವಣ್ಣನವರ ಶ್ರೇಷ್ಠ ಕೊಡುಗೆ ಏನೆಂಬುದನ್ನು ಸಾರಲು ವಚನ ಸಾಹಿತ್ಯದ ವಿಶ್ವ ಸಂದೇಶವನ್ನು ಜಗತ್ತಿಗೆ ಬಿತ್ತರಿಸಲು ಸ್ವತಂತ್ರ ಧರ್ಮದ ಮಾನ್ಯತೆ ಬೇಕು.

ಖಂಡ್ರೆ ಪರಿವಾರದ ಸ್ವಧರ್ಮ ದ್ರೋಹ

ಶ್ರೀ ಭೀಮಣ್ಣ ಖಂಡ್ರೆಯವರ ಶಾಲಾ ದಾಖಲಾತಿಯಲ್ಲಿ ಲಿಂಗಾಯತ ಎಂದು ಎದೆ. ಸಮಾಜಕ್ಕೆ ಆಗುವ ಉಪಕಾರ ಸಹ ಕಡೆಗಣಿಸಿ ವೀರಶೈವ ಮಹಾಸಭೆಯ ಅಧ್ಯಕ್ಷರಾದ

ಮಾತ್ರಕ್ಕೆ ವೀರಶೈವ ಪದವನ್ನು ಹಿಡಿದುಕೊಂಡು ವಾದಮಾಡುತ್ತ ಬಂದರು. ವೀರಶೈವ ಪದ ಇಟ್ಟುಕೊಂಡರೆ ಸ್ವತಂತ್ರ ಧರ್ಮದ ಸ್ಥಾನಮಾನ ಸಿಗುವುದಿಲ್ಲ ಎಂಬ ಬಗ್ಗೆ ಅನುಭವವಾಗಿದ್ದರೂ ಅಭಿಮಾನಕ್ಕೆ ಕಟ್ಟು ಬಿದ್ದು ವೀರಶೈವ ಪದವನ್ನು ಹಿಡಿದುಕೊಂಡು ಒದ್ದಾಡುತ್ತಾರೆ. ಅವರ ಕಾಲ ಮುಗಿಯಿತು ಎಂದುಕೊಳ್ಳುವಾಗಲೇ ಅವರ ಸುಪುತ್ರ ಶ್ರೀ ಈಶ್ವರ ಖಂಡ್ರೆ ಸೃಷ್ಟಿಯಾಗಿ ವೀರಶೈವ-ಲಿಂಗಾಯತದ ಪ್ರತಿಪಾದಕರಾಗಿದ್ದಾರೆ.

ದಿ-23-6-2017ರಂದು ಮುಖ್ಯ ಮಂತ್ರಿಗಳಿಗೆ ಮನವಿಯನ್ನು ಕೊಡಲು ಲಿಂಗಾಯತ ಧರ್ಮ ಮಹಾಸಭೆ ಮತ್ತು ರಾಷ್ಟ್ರೀಯ ಬಸವ ದಳದವರು ಹೋದಾಗ ಅವರು, "ಮೊದಲು ಚಿದಾನಂದ ಮೂರ್ತಿಯವರ ಬಾಯಿ ಮುಚ್ಚಿಸಿರಿ. ಎಂದು ಮೂರು ಸಲ ಹೇಳಿದರಂತೆ. ನಮ್ಮ ಕೆಲವು ಶರಣರು, "ಈಶ್ವರು ಖಂಡ್ರೆಯವರರಿಗೆ ಲಿಂಗಾಯತ ಪದದ ಬಗ್ಗೆ ಮನವೊಲಿಸಿರಿ." ಎಂದು ನನಗೆ ಹೇಳಿದರು. ಶ್ರೀ ಭೀಮಣ್ಣ ಖಂಡ್ರೆಯವರ ಕಾಲದಿಂದಲೂ ಹೇಳುತ್ತಲೇ ಬಂದಿದ್ದೇವೆ. ಶ್ರೀ ಈಶ್ವರ ಖಂಡ್ರೆಯವರಿಗಾಗಲಿ, ಡಾ॥ ಚಿ.ಮೂ ಅವರಿಗಾಗಲಿ ಮನವೊಲಿಸುವುದು ಸಾಧ್ಯವಿಲ್ಲ. ಏಕೆಂದರೆ ಅವರು ಏನೂ ತಿಳಿಯದವರಲ್ಲ. (ದುರು)ಉದ್ದೇಶಪೂರ್ವಕವಾಗಿ ವಾದ ಮಾಡುತ್ತಿರುವವರು. ನಿಜವಾಗಿಯೂ ನಿದ್ದೆ ಮಾಡುವವರನ್ನು ಎಬ್ಬಿಸಬಹುದು, ನಿದ್ದೆ ಮಾಡುವ ಸೋಗು ಹಾಕಿದವರನ್ನು ಎಬ್ಬಿಸುವುದು ಸಾಧ್ಯವಿಲ್ಲ.

ವೀರಶೈವಕ್ಕೆ ಪ್ರತ್ಯೇಕ ಸ್ಥಾನ

ವೀರಶೈವ ಮಹಾಸಭೆಯವರಿಗೆ ವೀರಶೈವ ಪದದ ಬಗ್ಗೆ ಕೃತಕ ವ್ಯಾಮೋಹವಿದ್ದರೆ ಅವರು ವೀರಶೈವಕ್ಕೆ ಸ್ವತಂತ್ರ ಧರ್ಮದ ಸ್ಥಾನ ನೀಡಲು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳಲ್ಲಿ ಮನವಿ ಸಲ್ಲಿಸಲಿ, ಲಿಂಗಾಯತ ಧರ್ಮಕ್ಕೆ ಕಾಲ್ತೊಡಕು ಆಗುವುದು ಬೇಡ. ಲಿಂಗಾಯತದೊಡನೆ ವೀರಶೈವವನ್ನು ತಳುಕುಹಾಕುವುದು ಸರಿಯಲ್ಲ. ಎರಡೂ ಭಿನ್ನ ವಿಚಾರಧಾರೆಯ ಪದಗಳನ್ನು ಸೇರಿಸುವುದರಿಂದ ಲಿಂಗಾಯತ ಧರ್ಮ ಸಮಾಜಗಳಿಗೆ ಅನ್ಯಾಯವನ್ನು ಮಾಡಿದಂತಾಗುತ್ತದೆ.

ಜಾತಿಗೊಂದೊಂದು ಧರ್ಮ ?!

ಲಿಂಗಾಯತವು ಸ್ವತಂತ್ರ ಧರ್ಮ ಎಂದು ಸ್ವತಂತ್ರ ಧರ್ಮದ ಮಾನ್ಯತೆಗಾಗಿ ನಾವು ಪ್ರಯತ್ನ ಮಾಡುತ್ತಿರುವುದು ಕೆಲವು ಜನರಿಗೆ ಸಂಕುಚಿತವಾಗಿ ಕಾಣುತ್ತದೆ. ಹೀಗಾದರೆ ಎಲ್ಲ ಜಾತಿಯವರೂ ತಮ್ಮದು ಒಂದು ಧರ್ಮ ಎಂದು ಪ್ರತ್ಯೇಕವಾಗಲು ಯತ್ನಿಸಬಹುದಲ್ಲವೆ ಎಂದು ಅಂಥವರ ವಾದ. ಜಾತಿ ಬೇರೆ ಧರ್ಮ ಬೇರೆ. ಧರ್ಮಕ್ಕೆ ತನ್ನದೆ ಆದ ಲಕ್ಷಣಗಳಿರುತ್ತವೆ ಜಾತಿಯು ಹುಟ್ಟಿನಿಂದ ಬರುತ್ತದೆ. ಧರ್ಮವು ಸಂಸ್ಕಾರ(ದೀಕ್ಷೆ)ದಿಂದ ಬರುತ್ತದೆ. ಧರ್ಮಕ್ಕೆ ತನ್ನದೆ ಆದ ಸಾಹಿತ್ಯ, ಯೋಗ, ದರ್ಶನ, ಸಮಾಜ ಶಾಸ್ತ್ರ, ದೀಕ್ಷಾ ವಿಧಿ, ಇತ್ಯಾದಿ ಇರುತ್ತವೆ. ಜಾತಿಗೆ ಇವೆಲ್ಲ ಇರುವುದಿಲ್ಲ. ಆದ್ದರಿಂದ ವಿವಿಧ ಜಾತಿಗಳವು ತಮ್ಮದು ಒಂದು ಧರ್ಮ ಎಂದು ಘೋಷಿಸಿಕೊಳ್ಳಲು, ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ.

ವೀರಶೈವ ಮಹಾಸಭೆ ಲಿಂಗಾಯತ ಧರ್ಮದ ವೃಕ್ಷದ ಆಸರೆಯಲ್ಲಿ ಪರಾವಲಂಬಿಯಾಗಿ ವೀರಶೈವವನ್ನು ಬೆಳೆಸಲು ಹೋಗಿ ಲಿಂಗಾಯತ ಎಂಬ ಸ್ವತಂತ್ರ ವೃಕ್ಷದ ಜೀವ ಸೆಳೆಯಲು ಹೋಗದೆ, ತಮ್ಮ ವೀರಶೈವವನ್ನು ಸಮರ್ಥಿಸಿಕೊಂಡು ಮಾನ್ಯತೆ ಪಡೆಯಲು ಯತ್ನಿಸಲಿ ಎಂದು ಸ್ಪಷ್ಟ ಪಡಿಸಬಯಸುತ್ತೇವೆ.

ಮುಖ್ಯಮಂತ್ರಿಗಳದು ರಾಜಕೀಯ ಉದ್ದೇಶವೆ ?

ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರದು ರಾಜಕೀಯ ಸ್ವಾರ್ಥದ ಉದ್ದೇಶ ಎಂದು ಕೆಲವರು ಟೀಕಿಸಿದ್ದಾರೆ. ಹಾಗೆ ಟೀಕಿಸಿದ ರಾಜಕಾರಣಿಗಳೂ ರಾಜಕೀಯ ಉದ್ದೇಶದಿಂದ ಶ್ರೀ ಸಿದ್ದರಾಮಯ್ಯನವರು ಮಾಡಿದ್ದನ್ನು ಮಾಡಬಹುದಿತ್ತಲ್ಲವೆ? ವಿಜಯಪುರದ ಮಹಿಳಾ ವಿಶ್ವವಿದ್ಯಾಲಯಕ್ಕೆ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಎಂದು ನಾಮಕರಣ ಮಾಡಿದುದು, ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ವಿಶ್ವಗುರು ಬಸವಣ್ಣನವರ ಭಾವಚಿತ್ರ ಹಾಕಬೇಕೆಂಬುದು ಮಹತ್ವಪೂರ್ಣ ನಿರ್ಧಾರಗಳಾಗಿದ್ದು ಅವರನ್ನು ಎಲ್ಲರೂ ಅಭಿನಂದಿಸಬೇಕಲ್ಲವೆ?ಸ

ಸಮೀಕ್ಷಾ ಸಮಿತಿ

ಹಿಂದೆ ಕೂಡಲ ಸಂಗಮದ ಸಂಗಮೇಶ್ವರ ದೇವಾಲಯದ ಕೀಳುವಿಕೆಯ ಸಂದರ್ಭ ಬಂದಾಗ ಮೂಲ ಜಾಗದಲ್ಲೇ ಅದು ಉಳಿಯಬೇಕೆಂದು ನಾವು ಚಳುವಳಿ ಮಾಡಿದೆವು. ಆಗ ಕೆಲವು ಮಠಾಧೀಶರು, ಗಣ್ಯರು ಸಂಗಮೇಶ್ವರ ದೇವಾಲಯ ಸ್ಥಳಾಂತರಕ್ಕೆ ಸಂಚು ಮಾಡಿದರು. ಆಗ ಸರ್ಕಾರವು ಸಮೀಕ್ಷೆಗಾಗಿ ಒಂದು ಸಮಿತಿ ಮಾಡಿತು. ರಾಜ್ಯದಲ್ಲಿ ಎಲ್ಲೆಡೆ ಸಮಿತಿಯವರು ಸಂಚರಿಸಿ ಅಭಿಪ್ರಾಯ ಸಂಗ್ರಹಿಸಿ ಅಂತಿಮವಾಗಿ ಮೂಲ ಜಾಗದಲ್ಲಿಯೇ ದೇವಾಲಯವನ್ನು ಪುನರ್ನಿರ್ಮಾಣ ಮಾಡುವ ನಿರ್ಧಾರ ಕೈಗೊಂಡರು. ಈಗಾದರೂ ಸರ್ಕಾರವು ಒಂದು ಸಮಿತಿ ರಚಿಸಿ ಅಭಿಪ್ರಾಯ ಸಂಗ್ರಹಿಸುವ ಪ್ರಯತ್ನ ಮಾಡಬೇಕು. ಜನ ಸಾಮಾನ್ಯರ ಅಭಿಪ್ರಾಯವೂ ಬಲು ಮುಖ್ಯ. ಶ್ರೀ ಈಶ್ವರ ಖಂಡ್ರೆ, ಶ್ರೀ ಡಾ॥ ಚಿ.ಮೂ ಮುಂತಾದವರು ಪೂರ್ವಾಗ್ರಹ ಪೀಡಿತರು. ವೀರಶೈವ ಮಹಾಸಭಾ ಇಡೀ ಸಮಾಜದ ಪ್ರತಿನಿಧಿಯಲ್ಲ. ಜಾತಿ ಜನಗಣತಿಯ ಪಟ್ಟಿಯಲ್ಲಿ ಲಿಂಗಾಯತ ಬಣಜಿಗ, ಲಿಂಗಾಯತ ಗಾಣಿಗ, ಲಿಂಗಾಯತ ಕುಂಬಾರ ಎಂದು ಇರುವಂತೆ ವೀರಶೈವ ಮೂಲದಿಂದ ಬಂದ ವೀರಶೈವ ಲಿಂಗಾಯತರು ಇದ್ದಾರೆ. ಇದೇ ಪದ ಇಡೀ ಸಮಾಜವನ್ನು ಪ್ರತಿನಿಧಿಸದು. ಮಹಾರಾಷ್ಟ್ರದ ಲಿಂಗಾಯತ ಸಮುದಾಯದ ಪಟ್ಟಿಯಲ್ಲಿ ವೀರಶೈವ ಪದವೇ ಇಲ್ಲ. ತಮಿಳುನಾಡಿನಲ್ಲಿ ಎರಡೂ ಸಮುದಾಯಗಳು ಪ್ರತ್ಯೇಕವಾಗಿ ಇದ್ದು ಉಭಯತರ ಆಚಾರ, ವಿಚಾರ, ಸಂಸ್ಕೃತಿ, ಆರಾಧನಾ ಪದ್ಧತಿ ಬೇರೆಯೇ ಆಗಿವೆ. ಸಮಿತಿಯು ಈ ಸತ್ಯವನ್ನು ಅಧ್ಯಯನ ಮಾಡಬೇಕು. ಕರ್ನಾಟಕ ಸರ್ಕಾರ ಲಿಂಗಾಯತ ಪದಕ್ಕೆ ಮಾನ್ಯತೆ ಕೊಡಬೇಕೆಂದು ನಾವು ಆಗ್ರಹಿಸುತ್ತೇವೆ.

*****

ಅಕ್ಕನ ಅಮರವಾಣಿ

ಭಾಗ- 42 – ಮಾತಾಜಿ

408.

ಅಯ್ಯಾ, ಸದಾಚಾರ ಸದ್ಭಕ್ತಿ ಸತ್ಕ್ರಿಯಾ ಸಮ್ಯಕ್‌ಜ್ಞಾನ ಸದ್ವರ್ತನೆ
ಸಗುಣ ನಿರ್ಗುಣ ನಿಜಗುಣ ಸಚ್ಚರಿತ್ರ ಸದ್ಭಾವ
ಅಕ್ರೋಧ ಸತ್ಯವಚನ ಕ್ಷಮೆ ದಮೆ ಭವಿ ಭಕ್ತಭೇಧ
ಸತ್ಪಾತ್ರ ದ್ರವ್ಯಾರ್ಪಣ ಗೌರವಬುದ್ಧಿ ಲಿಂಗಲೀಯ ಜಂಗಮಾನುಭಾವ
ತ್ರಿವಿಧ ಷಡ್ವಿಧ ನವವಿಧ ಲಿಂಗಾರ್ಚನೆ,
ತ್ರಿವಿಧ ಷಡ್ವಿಧ ನವವಿಧ ಜಪ,
ತ್ರಿವಿಧ ಷಡ್ವಿಧ ನವವಿಧ ಲಿಂಗಾರ್ಪಣಾ.
ಚಿದ್ವಿಭೂತಿ ಸ್ನಾನ ಧೂಳಣ ಧಾರಣ, ಸರ್ವಾಂಗದಲ್ಲಿ ಚಿದ್ರುದ್ರಾಕ್ಷಿಧಾರಣ,
ತಾ ಮಾಡುವ ಸತ್ಯಕಾಯಕ
ತಾ ಬೇಡುವ ಸದ್ಭಕ್ತಿ ಭಿಕ್ಷ, ತಾ ಕೊಟ್ಟು ಕೊಂಬ ಭೇದ,
ತಾನಾಚರಿಸುವ ಸತ್ಯನಡೆನುಡಿ, ತಾ ನಿಂದ ನಿರ್ವಾಣಪದ,
ಇಂತೀ ಬತ್ತಿಸ ನೆಲೆಕಲೆಗಳ ಸದ್ಗುರುಮುಖದಿಂದರಿದ
ಬಸವ ಮೊದಲಾದ ಸಮಸ್ತ ಗಣಂಗಳೆಲ್ಲಾ ಪ್ರಮಥ
ನಿರಾಭಾರಿ ಶರಣ ಸನ್ಮಾರ್ಗವಿಡಿದಾಚರಿಸಿದರು ನೋಡಾ.
ಇಂತು ಪ್ರಥಮಗಣವಾಚರಿಸಿದ
ಸತ್ಯ ಸನ್ಮಾರ್ಗವರಿಯದ ಮೂಢಅಧಮರನೆಂತು
ಶಿವಶಕ್ತಿ ಶಿವಭಕ್ತ ಶಿವಜಂಗಮವೆಂಬೆನಯ್ಯಾ
ಚೆನ್ನಮಲ್ಲಿಕಾರ್ಜುನದೇವರ ದೇವಾ

ಗುರು ಬಸವಣ್ಣನವರು ಹಾಕಿಕೊಟ್ಟ ಶರಣ ಪಥ ಬಹಳ ವೈಶಿಷ್ಟ್ಯ ಪೂರ್ಣವಾದುದು. ಇದು ಸದಾಚಾರದ ಮೇಲೆ ನಿಂತುದು ಸದಾಚಾರ ಎಂದರೆ ಸಮ್ಯಕ್ ಪೂರ್ಣವಾದ ಆಚಾರ. ಲಿಂಗಾಯತ ಧರ್ಮದಲ್ಲಿ ಆಚಾರವು ವೈಚಾರಿಕ ಹಿನ್ನೆಲೆಯಿಂದ ಕೂಡಿರಬೇಕು ಮತ್ತು ಭಕ್ತಿರಸ ಭರಿತವಾಗಿರಬೇಕು. ಯಾಂತ್ರಿಕ ಆಚರಣೆಯು ಸೂಕ್ತ ಫಲ ಕೊಡದು ಭಕ್ತಿಯು ವಿಚಾರಶೀಲತೆಯಿಂದ ಸಂಸ್ಕರಣಗೊಂಡಾಗ ಮಾತ್ರ ಅದು ಸದ್ಭಕ್ತಿಯಾಗುತ್ತದೆ, ಇಲ್ಲವಾದರೆ ಅದು ಮೂಢ ಭಕ್ತಿಯಾಗುತ್ತದೆ. ಸದಾಚಾರ, ಸದ್ಭಕ್ತಿಯ ಜೊತೆಗೆ ಸತ್ಕ್ರಿಯೆಯೂ ಅತ್ಯಗತ್ಯ ಅದು ನಡೆನುಡಿಗಳಲ್ಲಿ ವ್ಯಕ್ತವಾಗಬೇಕು. ಪ್ರತಿಯೊಂದು ತತ್ತ್ವದ ಬಗ್ಗೆ ಸಮ್ಯಕ್‌ನ ಹೊಂದಿರಬೇಕು. ಶರಣನ ಲಕ್ಷಣವೆಂದರೆ ಸದ್ವರ್ತನೆ. ಕಂಡ ಭಕ್ತರಿಗೆ ಕೈ ಮುಗಿವಾತನೇ ಭಕ್ತ ; ಮೃದು ವಚನವೇ ಸಕಲ ಜಪ, ಮೃದು ವಚನವೇ ಸಕಲ ತಪ, ಸದ್ವಿನಯವೇ ಸದಾ ಶಿವನ ಒಲಿಮೆ ಎಂಬುದನ್ನು ಶರಣನ ನಡೆ-ನುಡಿಗಳಲ್ಲಿ ಅಳವಡಿಸಿಕೊಳ್ಳಬೇಕು.

ದೇವನು ಸಗುಣ ಮತ್ತು ನಿರ್ಗುಣ, ವ್ಯಕ್ತ ಮತ್ತು ಅವ್ಯಕ್ತ ತಂದೆಯಾಗಿ ಈ ಜಗತ್ತಿಗೆ ಕಾರಣೀಭೂತನಾಗಿರುವನು ತಾಯಿಯಾಗಿ ಜಗತ್ತು ಮತ್ತು ಜೀವರಾಶಿಯನ್ನು ಸಲಹುತ್ತಾನೆ ಶರಣನು ಸದ್ಗುಣ ಸಂಪನ್ನನಾಗಿರಬೇಕು ಸದ್ಗುಣಗಳನ್ನು ಅಳವಡಿಸಿಕೊಳ್ಳದೆ ಎಷ್ಟು ಕಾಲ ಪೂಜೆಯನ್ನು ಮಾಡಿದರೂ ಪ್ರಯೋಜನವಾಗದು. ಶರಣನಿಗೆ, ವಿರಕ್ತನಿಗೆ ಸಚ್ಚಾರಿತ್ರ್ಯ ಅಗತ್ಯ ಅವನನ್ನು ಅನುಸರಿಸುವ ಅವನನ್ನು ಮಾದರಿಯಾಗಿ ಇಟ್ಟುಕೊಂಡು ಮಾರ್ಗದರ್ಶನ ಬಯಸುವ ಅನುಯಾಯಿಗಳಿಗೆ, ಅಭಿಮಾನಿಗಳಿಗೆ ಶರಣನ ಚಾರಿತ್ರ್ಯ ಬಹಳ ಮುಖ್ಯ ರಾಗ ದ್ವೇಷಗಳಿಲ್ಲದ ಸದ್ಭಾವವು ಶರಣನಿಗೆ ಬಹುಮುಖ್ಯ ಅವನು ಯಾರ ಬಗ್ಗೆಯೂ ಮಮಕಾರವನ್ನಾಗಲೀ ದ್ವೇಷವನ್ನಾಗಲೀ ಹೊಂದಿರಬಾರದು. ಅಕ್ರೋಧ ಅಂದರೆ ಕೋಪವು ಇಲ್ಲದಿರುವ ಶಾಂತ ಸ್ವಭಾವ ಅಳವಡಿಸಿಕೊಳ್ಳಬೇಕು ಶರಣನು ಸತ್ಯವನ್ನೇ ನುಡಿಯಬೇಕು. ಯಾರ ಒತ್ತಾಯಕ್ಕೂ ಸುಳ್ಳನ್ನು ಹೇಳಬಾರದು. ಕ್ಷಮಾಗುಣ ಶರಣನ ವ್ಯಕ್ತಿತ್ವಕ್ಕೆ ಶೋಭೆ ತರುವಂಥದ್ದು. ತಪ್ಪು ಮಾಡುವುದು ಮಾನವ ಸಹಜ ಗುಣ. ಮಾಡಿದ ತಪ್ಪನ್ನು ತಿದ್ದಿಕೊಳ್ಳಲು ಅವಕಾಶ ನೀಡದೆ ಚುಚ್ಚಿ ಮಾತನಾಡುವುದು ದಾನವ ಗುಣ. ಮಾಡಿದ ತಪ್ಪನ್ನು ಕ್ಷಮಿಸಿ ತಿದ್ದಿಕೊಳ್ಳಲು ಅವಕಾಶ ನೀಡುವುದೇ ದೇವ ಮಾನವ ಶರಣನ ಗುಣ. ಕ್ಷಮೆ ಎನ್ನುವುದು ದುರ್ಬಲರ ಲಕ್ಷಣವಲ್ಲ.ಮಾನಸಿಕ ಸ್ಥೈರ್ಯ ಇರುವ ಆತ್ಮ ವಿಶ್ವಾಸಿಗಳ ಲಕ್ಷಣ. ದಮೆ ಎಂದರೆ ಬಹಿರಿಂದ್ರಿಯ ನಿಗ್ರಹ. ತನ್ನ ಇಂದ್ರಿಯಗಳನ್ನು ಸ್ವೇಚ್ಛೆಯಾಗಿ ಹರಿಯಲು ಬಿಡದೆ ನಿಯಂತ್ರಿಸುವುದೇ ದಮೆ. ಅಂತರಿಂದ್ರಿಯಗಳನ್ನು ನಿಗ್ರಹ ಮಾಡುವುದೇ ಶಮೆ ಭವಿ-ಭಕ್ತ ಭೇದವೂ ಶರಣನ ಲಕ್ಷಣ. ಭಿನ್ನ ವಿಚಾರದವರು, ನಾಸ್ತಿಕರು, ಹಿಂಸಾವಾದಿಗಳು ಮುಂತಾದವರು ಭವಿಗಳು. ಅವರ ಒಡನಾಟದಿಂದ ವ್ಯಕ್ತಿಯ ಭಕ್ತಿ, ಶ್ರದ್ಧೆಗೆ ಚ್ಯುತಿ ಬರುವ ಕಾರಣ ಅಂಥವರ ಸಾಂಗತ್ಯದಿಂದ ದೂರವಿರಬೇಕು. ಶರಣನ ಇನ್ನೊಂದು ಲಕ್ಷಣ ಸತ್ಪಾತ್ರ ದ್ರವ್ಯಾರ್ಪಣ. ತಾನು ಪ್ರಾಮಾಣಿಕ ಕಾಯಕದಿಂದ ಆರ್ಜಿಸಿದ ದ್ರವ್ಯವು ಅಪಾತ್ರರಿಗೆ, ತತ್ತ್ವವಿರೋಧಿಗಳಿಗೆ ಸಲ್ಲಬಾರದು ಎಂಬ ಪ್ರಜ್ಞೆ ಸದಾ ಇರಬೇಕು. ಒಂದು ಚಾಕು ವೈದ್ಯನ ಕೈಯಲ್ಲಿದ್ದರೆ ಜೀವ ಉಳಿಸಿ, ಉಪಕಾರ ಮಾಡುತ್ತದೆ ಕಟುಕನ ಕೈಯಲ್ಲಿದ್ದರೆ ಜೀವ ತೆಗೆದು ವಧೆ ಮಾಡುತ್ತದೆ ಹಾಗೆ ಸಂಪತ್ತು ಸಹ ಸದ್ವಿನಿಯೋಗವಾಗಬೇಕು.

ಶರಣನ ಇನ್ನೊಂದು ಲಕ್ಷಣ ಗೌರವ ಬುದ್ದಿ, ಗುರುಹಿರಿಯರಿಗೆ ಗೌರವ ಕೊಡಬೇಕು ಉದಾಸೀನ ಮಾಡಬಾರದು. ತನಗಿಂತ ವಿದ್ಯೆ, ಅಂತಸ್ತು, ಪ್ರತಿಭೆ ಮುಂತಾದ ಯಾವ ವಿಷಯದಲ್ಲೇ ಇರಲಿ ಸಣ್ಣವರಾದವರಲ್ಲಿ ಅನುಕಂಪ, ವಾತ್ಸಲ್ಯ, ಸಹಾನುಭೂತಿ ಇರಬೇಕೇ ವಿನಾ ತಿರಸ್ಕಾರವಾಗಲಿ ಉದಾಸೀನತೆಯಾಗಲಿ ಇರಬಾರದು.

ಶರಣನ ಇನ್ನೊಂದು ಲಕ್ಷಣ ಇಷ್ಟಲಿಂಗ ನಿಷ್ಠೆ, ಧರ್ಮ ಗುರುವಿನಲ್ಲಿ ಭಕ್ತಿ, ಇಷ್ಟಲಿಂಗದಲ್ಲಿ ನಿಷ್ಠೆ, ಜಂಗಮದಲ್ಲಿ ಅಭಿಮಾನವಿರಬೇಕು ಕೆಲವರು ವಚನ ಸಾಹಿತ್ಯದ ಬಗ್ಗೆ ದೊಡ್ಡ ದೊಡ್ಡ ಪುಸ್ತಕ ಬರೆಯುತ್ತಾರೆ. ಉಪನ್ಯಾಸ ಮಾಡುತ್ತಾರೆ ಆದರೆ ಇಷ್ಟಲಿಂಗ ಧಾರಣೆ, ಪೂಜೆ ಇರುವುದೇ ಇಲ್ಲ. ಇವರು ಕೇವಲ ಸಾಹಿತಿಗಳೇ ವಿನಾ ಅನುಭಾವಿಗಳಲ್ಲ ಇವರಿಗೆ ವಚನ ಸ್ಯಾಹಿತ್ಯದ ತಿರುಳನ್ನು ಅನುಭವಿಸಲು ಸಾಧ್ಯವೇ ಆಗದು.

ಜಂಗಮಾನುಭಾವ ಅನುಯಾಯಿಯ ಅತಿ ಮುಖ್ಯ ಆಚರಣೆ ಶರಣನು ನಿರಂತರವಾಗಿ ಶರಣನ ಸತ್ಸಂಗದಲ್ಲಿ ಭಾಗವಹಿಸುತ್ತಿರಬೇಕು. ಅದೇ ಗಣಮೇಳಾಪ ನಿಷ್ಠೆ. ಅಕ್ಕಮಹಾದೇವಿ ಒಂದು ವಚನದಲ್ಲಿ ಜೀವಿಸುವ ಜೀವಿತಕ್ಕೆ ಶೃಂಗಾರ ಗಣ ಮೇಳಾಪ ಎಂದು ಹೇಳುತ್ತಾರೆ. ಜಂಗಮಾನುಭಾವದಿಂದ ಮನಶಾಂತಿ ಸಿಗುತ್ತದೆ, ಸುಜ್ಞಾನ, ದಿಗ್ದರ್ಶನ ಪ್ರಾಪ್ತವಾಗುತ್ತದೆ. ಶರಣನ ಮತ್ತೊಂದು ಲಕ್ಷಣ ತ್ರಿವಿಧ, ಷಡ್ವಿಧ ಲಿಂಗಾರ್ಚನೆ, ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ತ್ರಿವಿಧ ಲಿಂಗಗಳು ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಪ್ರಸಾದಲಿಂಗ, ಜಂಗಮಲಿಂಗ, ಮಹಾಲಿಂಗ ಇವು ಷಡ್ವಿಧ ಲಿಂಗಾರ್ಚನೆ.

ತ್ರಿವಿಧ ಷಡ್ವಿಧ ನವವಿಧ ಜಪ-ಇದರಲ್ಲಿ ವಾಚಕ, ಉಪಾಂಶು, ಮಾನಸಿಕ ಎಂದು ಮೂರು ಬಗೆ. ಉಳಿದ ಆರರ ಪಟ್ಟಿ ಸಿಕ್ಕಿಲ್ಲ ತ್ರಿವಿಧ ಷಡ್ವಿಧ ನವವಿಧ ಲಿಂಗಾರ್ಪಣ-ಪದಾರ್ಥವನ್ನು ಸ್ವೀಕರಿಸುವಾಗ ರೂಪವನ್ನು ಇಷ್ಟಲಿಂಗಕ್ಕೆ ರುಚಿಯನ್ನು ಪ್ರಾಣ ಲಿಂಗಕ್ಕೆ, ತೃಪ್ತಿಯನ್ನು ಭಾವಲಿಂಗಕ್ಕೆ ಅರ್ಪಿಸುವುದು ತ್ರಿವಿಧ ಆರರ ಪಟ್ಟಿ ಸಿಕ್ಕಿಲ್ಲ.

ಶರಣನ ಸಾಧಕನ ಮತ್ತೊಂದು ಲಕ್ಷಣ ವಿಭೂತಿ ಧಾರಣೆ ವಿಭೂತಿಯನ್ನು ಕೈಗೆ ಹಚ್ಚಿಕೊಂಡು ಮೈಯೆಲ್ಲ ಸವರಿಕೊಳ್ಳುವುದು ವಿಭೂತಿ ಸ್ನಾನ, ಕೆಲವು ಭಾಗಗಳಿಗೆ ಅಂದರೆ ನೆತ್ತಿ, ಕಣ್ಣು ಮುಂತಾಗಿ ತಾಡಿಸುವುದು ವಿಭೂತಿ ಧೂಳಣ ಹಣೆಯಿಂದ ಹಿಡಿದು ಪಾದದವರೆಗೆ ಮೂರು ಬೆರಳುಗಳಿಂದ ಧರಿಸುವುದು ವಿಭೂತಿ ಧಾರಣೆ, ಶರಣನ ದಿವ್ಯ ಆಭರಣ ರುದ್ರಾಕ್ಷಿ ಸಂಸಾರಿ ಸನ್ಯಾಸಿ ಎಂಬ ಭೇದವಿಲ್ಲದೆ ಯಾರು ಬೇಕಾದರೂ ರುದ್ರಾಕ್ಷಿ ಧರಿಸಬಹುದು. ಲಾಂಛನ ಧಾರಿಯಾದ ಶರಣನು ಸತ್ಯ ಶುದ್ಧ ಕಾಯಕವನ್ನು ಮಾಡಬೇಕು ಶಾರೀರಿಕ, ವಾಚಕ. ಬೌದ್ಧಿಕ ಯಾವ ಕಾಯಕವಾದರೂ ಸರಿ ಕಾಯಕವಿಲ್ಲದೆ ಇರಲಾಗದು. ಭಕ್ತರಲ್ಲಿ ಅನುಯಾಯಿಗಳಲ್ಲಿ ಭಕ್ತಿ ಭಿಕ್ಷೆ ಬೇಡ ಬೇಕು. ತನ್ನಲ್ಲಿರುವ ಜ್ಞಾನ, ತಪಸ್ಸು, ಅನುಗ್ರಹ ಶಕ್ತಿಯನ್ನು ಇತರರಿಗೆ ದಯಪಾಲಿಸಬೇಕು ಅವರು ಕೊಡುವ ಧನ, ಧಾನ್ಯ, ಕನಕ, ಭೂಮಿ ಮುಂತಾದುವನ್ನು ಪಡೆದು ಸಮಾಜಕ್ಕೆ ಸೇವೆ ಸಲ್ಲಿಸಬೇಕು. ಯಾವುದೇ ರೀತಿ ವಂಚನೆ ಮಾಡದೆ ಸತ್ಯದ ನಡೆ-ನುಡಿಗಳನ್ನು ಅಳವಡಿಸಿಕೊಂಡು ನಿರ್ವಾಣ ಸ್ಥಿತಿಯಲ್ಲಿ ನಿಲ್ಲಬೇಕು ಹೀಗೆ ಮೂವತ್ತೆರಡು ಗುಣಗಳನ್ನು ಅರಿತುಕೊಂಡು ಗುರು ಬಸವಣ್ಣನವರು ಮೊದಲಾದ ಆದಿ ಶರಣರು ನಿರಾಭಾರಿ ಶರಣ ಸನ್ಮಾರ್ಗವನ್ನು ಅವಲಂಭಿಸಿದರು. ಹೀಗೆ ಪ್ರಥಮ ಗಣವಾದ ಆದಿ ಶರಣರು ಆಚರಿಸಿದ ಸತ್ಯವಾದ ಸನ್ಮಾರ್ಗವನ್ನು ಅರಿತುಕೊಳ್ಳದ ಮೂಢರನ್ನು ಶಿವಭಕ್ತ, ಭಕ್ತೆ, ಜಂಗಮ ಎಂದು ಹೇಗೆ ಕರೆಯಲು ಸಾಧ್ಯ?

409. ಭ್ರಮಾಧೀನರು ಭಕ್ತರಲ್ಲ

ಅಯ್ಯಾ, ಸರ್ವಮೂಲಹಂಕಾರವಿಡಿದು
ಕುಲಭ್ರಮೆ ಛಲಭ್ರಮೆ ಜಾತಿಭ್ರಮೆ,
ತರ್ಕಭ್ರಮೆ ರಾಜ್ಯಭ್ರಮೆ, ಧನ ಧಾನ್ಯ ಪುತ್ರ ಮಿತ್ರಭ್ರಮೆ,
ಐಶ್ವರ್ಯ ತ್ಯಾಗ ಭೋಗ ಯೋಗ ಭ್ರಮೆ,

ಕಾಯ ಕರಣ ವಿಷಯಭ್ರಮೆ,
ವಾಯು ಮನ ಭಾವ ಜೀವ ಮೋಹಭ್ರಮೆ,
ನಾಹಂ ಕೋಹಂ ಸೋಹಂ ಮಾಯಾಭ್ರಮೆ ಮೊದಲಾದ
ಬತ್ತೀಸ ಪಾಶಭ್ರಮಿತರಾಗಿ ತೊಳಲುವ ವೇಷಧಾರಿಗಳ ಕಂಡು
ಶಿವಶಕ್ತಿ ಶಿವಭಕ್ತ ಶಿವಪ್ರಸಾದಿ ಶಿವಶರಣ ಶಿವೈಕ್ಯ
ಶಿವಜಂಗಮವೆಂದು ನುಡಿಯಲಾರದೆ ಎನ್ನ ಮನ ನಾಚಿ
ನಿಮ್ಮಡಿಗಭಿಮುಖವಾಯಿತ್ತಯ್ಯಾ ಚೆನ್ನಮಲ್ಲಿಕಾರ್ಜುನಾ.

ಮಾನವನಲ್ಲಿ ಎಲ್ಲ ಭ್ರಮೆಗೂ ಕಾರಣವಾಗುವುದು ಅಹಂಕಾರ. ತಾನು ಶ್ರೇಷ್ಠ ಕುಲದವನು ಎಂದು ಭೇದ ಮಾಡುವುದಾಗಲೀ ಸಲ್ಲದು. ಹಾಗೆಯೇ ತನ್ನ ನಂಬಿಕೆಯೇ ಸರಿ, ತನ್ನ ವಾದವೇ ಸರಿ ಎಂದು ಛಲ ತಾಳುವುದೂ ಸರಿಯಲ್ಲ. ಸತ್ಯವನ್ನು ನಂಬುವ ಪ್ರಾಮಾಣಿಕತೆ ಬೆಳೆಸಿಕೊಳ್ಳಬೇಕು. ತಾನು ಹುಟ್ಟಿದ ಜಾತಿಯ ಬಗ್ಗೆ ಸಹ ಮೇಲರಿಮೆಯಾಗಲೀ, ಕೀಳರಿಮೆಯಾಗಲಿ ಇರಬಾರದು. ತರ್ಕ ಭ್ರಮೆ ಎಂದರೆ ಕೇವಲ ವಾದಕ್ಕಾಗಿ ವಾದ ಮಾಡುವುದು. ಸತ್ಯವನ್ನು ತಿಳಿದುಕೊಳ್ಳಲಿಕ್ಕೆ ವಾದಮಾಡಬೇಕೇ ವಿನಾ ವಾಚಾಳಿತನದಿಂದಲ್ಲ. ರಾಜ್ಯ ಭ್ರಮೆ ಎಂದರೆ ಅಧಿಕಾರ ಭ್ರಮೆ. ಧನ, ಧಾನ್ಯ, ಪುತ್ರ, ಮಿತ್ರ, ಐಶ್ವರ್ಯ ಇವುಗಳ ಭ್ರಮೆಯೂ ಸಲ್ಲದು. ತ್ಯಾಗ ಮಾಡಿದ ವ್ಯಕ್ತಿಗೆ ತಾನು ತ್ಯಾಗ ಮಾಡಿದ್ದೇನೆ ಎಂಬ ಅಹಂಪ್ರಜ್ಞೆ ಕಾಡಬಾರದು. ಸುಖ-ಸಂತೋಷ ಸಂಪತ್ತಿನಿಂದ ಕೂಡಿರುವ ವ್ಯಕ್ತಿ. ಅದರ ಬಗ್ಗೆಯೇ ವ್ಯಾಮೋಹ ತಾಳಿರಬಾರದು. ಇದೆಲ್ಲವೂ ಲಿಂಗದೇವನು ಕೊಟ್ಟ ಪ್ರಸಾದ ಎಂದು ಕೃತಜ್ಞತಾ ಭಾವ ತಾಳಿರಬೇಕು.

ಯೋಗ ಭ್ರಮೆ ಕೆಲವು ಜನರಲ್ಲಿ ಕಾಣುತ್ತೇವೆ. ತಾವೇ ಬಹಳ ದೊಡ್ಡ ಸಾಧಕರೆಂದು ಇನ್ನಿತರರು ಅಜ್ಞಾನಿಗಳೆಂದು ತಾವು ತಪಸ್ವಿಗಳು, ಶಾಪಾನುಗ್ರಹ ಸಮರ್ಥರು ಎಂಬ ಹಮ್ಮಿನಿಂದ ವರ್ತಿಸುತ್ತಾರೆ. ಕೆಲವರಲ್ಲಿ ಕಾಯ ಭ್ರಮೆ ಕಾಡುತ್ತದೆ. ತಾವು ಬಹಳ ಸುಂದರವಾಗಿರುವವರು, ಆರೋಗ್ಯವಂತರು; ಇಂದ್ರಿಯಗಳನ್ನು ನಿಯಂತ್ರಿಸಬಲ್ಲ ಸಂಯಮಗಳು ಎಂಬ ಭ್ರಮೆ ಇರುತ್ತದೆ. ಅಪಾರವಾದ ಸುಖ, ಭೋಗ, ವಿಲಾಸ ಇರುವಾಗ ಅದರ ಬಗ್ಗೆಯೇ ಅಹಂಭಾವ ತಾಳಿ ವರ್ತಿಸುತ್ತಾರೆ. ವಾಯು ಭ್ರಮೆ ಎಂದರೆ ತಾವು ಉಸಿರನ್ನು ನಿಯಂತ್ರಿಸಬಲ್ಲರು, ನೀರಿನ ಮೇಲೆ ತೇಲಬಲ್ಲರು ಎಂಬ ಅಹಂಭಾವ ತಮ್ಮ ಬಗ್ಗೆ ತಾವೇ ಅಭಿಮಾನ ಪಡುವುದು; ತಮ್ಮ ಜೀವದ ಬಗ್ಗೆ ಅತಿಯಾದ ಆಸೆ ಹೊಂದಿರುವುದೂ ಭ್ರಮೆಯೆ ! ನ ಅಹಂ-ದೇಹವೇ ನಾನಲ್ಲ; ಕರಣೇಂದ್ರಿಯಗಳು ನಾನಲ್ಲ. ಎಂಬ ಭಾವ; ಹಾಗಾದರೆ ನಾನು ಯಾರು? (ಕೋಹಂ) ಸ ಅಹಂ ಅಂದರೆ ಅವನೇ (ದೇವನೆ)ನಾನು ಎಂಬುದು. ಇವೆಲ್ಲವೂ ಮಾಯೆಯಾಗಿ ಕಾಡುತ್ತವೆ. ಇಂಥ ಮೂವತ್ತೆರಡು ಭ್ರಮೆಗಳಿಂದ ಬಂಧಿತರಾಗಿ ತೊಳಲುವ ವೇಷಧಾರಿಗಳು ಶಿವಭಕ್ತೆ ಶಿವಭಕ್ತ ಶಿವಪ್ರಸಾದಿ, ಶಿವಶರಣ, ಶಿವೈಕ್ಯ, ಶಿವಜಂಗಮ ಎಂದು ಹೇಳಿಕೊಳ್ಳುವುದು ಹಾಸ್ಯಾಸ್ಪದವಾಗಿ ನನಗೆ ತೋರುತ್ತದೆ ಎನ್ನುತ್ತಾರೆ ಅಕ್ಕನವರು. (ಮುಂದುವರಿಯುವುದು)

ವಚನ ಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳು

– ಮಾತಾಜಿ

ಮಾನವ ಎಂದಾಗ ಹಲವು ಹುಟ್ಟು ಗುಣಗಳ ಆಗರ. ಹದಿನಾರು ಹುಟ್ಟುಗುಣಗಳನ್ನು ಮನಶ್ಶಾಸ್ತ್ರಜ್ಞರು ಗುರುತಿಸುತ್ತಾರೆ. ಈ ಹುಟ್ಟುಗುಣಗಳಿಂದಾಗಿ ವ್ಯಕ್ತಿ ಅನೇಕ ತಪ್ಪುಗಳನ್ನು ಮಾಡುತ್ತಾನೆ. ಹಾಗೆ ತಪ್ಪು ಮಾಡಿದಾಗ ತಪ್ಪಿತಸ್ಥನನ್ನು ಕ್ರೂರವಾಗಿ ಕಠೋರ ಮನಸ್ಸಿನಿಂದ ಶಿಕ್ಷಿಸುವ ಕಟ್ಟುಪಾಡನ್ನು ಧಾರ್ಮಿಕ ಶಾಸನಗಳಲ್ಲಿ ಕಾಣಬಹುದು. ಸಂಪ್ರದಾಯವಾದಿ ಧರ್ಮ ಮತ್ತು ಪ್ರಗತಿಪರ ಧರ್ಮಗಳ ದೃಷ್ಟಿಕೋನದಲ್ಲಿ ಪ್ರಮುಖ ವ್ಯತ್ಯಾಸವನ್ನು ಕಾಣುತ್ತೇವೆ. ಸಂಪ್ರದಾಯವಾದಿ ಧರ್ಮವು ನಿರ್ದಯವಾಗಿ ಅಪರಾಧಿಯನ್ನು ನಡೆಸಿಕೊಂಡರೆ ಪ್ರಗತಿಪರ ಧರ್ಮವು ಸಹಾನುಭೂತಿಯಿಂದ ನಡೆಸಿಕೊಳ್ಳುವುದು.

ವಚನ ಸಾಹಿತ್ಯವು ಮಾನವೀಯ ಮೌಲ್ಯಗಳಿಂದ ಕೂಡಿದ ಪ್ರಗತಿಪರ ಧರ್ಮವಾಗಿದೆ. ಇದರ ಆದ್ಯರಾದ ಧರ್ಮಗುರು ಬಸವಣ್ಣನವರು ಹೇಳುತ್ತಾರೆ:

ದಯವಿಲ್ಲದ ಧರ್ಮವದೇವುದಯ್ಯ?
ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ
ದಯವೇ ಧರ್ಮದ ಮೂಲವಯ್ಯ
ಲಿಂಗದೇವನಂತಲ್ಲದೊಲ್ಲನಯ್ಯ.

ದಯೆ ಒಂದು ದೈವೀಗುಣ. ಇದು ಇಲ್ಲದ್ದು ಧರ್ಮವೇ ಅಲ್ಲ ಎಂದು ಗುರು ಬಸವಣ್ಣನವರ ಅಭಿಪ್ರಾಯ. ಬಹುಪಾಲು ಜನರು ದಯವಿಲ್ಲದ ಧರ್ಮವು ಅದಾವುದಯ್ಯ ಎಂದು ಹೇಳುತ್ತಾರೆ. ಅದರರ್ಥ ಎಲ್ಲ ಧರ್ಮಗಳಲ್ಲೂ ದಯೆ ಇದೆ ಎಂದಾಗುತ್ತದೆ. ಕೆಲವು ಧರ್ಮಗಳು ಅಮಾನವೀಯ ದೃಷ್ಟಿಕೋನ ಹೊಂದಿವೆ. ಗುರು ಬಸವಣ್ಣನವರ ಹೇಳಿಕೆಯ ಉದ್ದೇಶ "ದಯೆ ಧರ್ಮದ ಮೂಲಭೂತ ಲಕ್ಷಣವಾಗಬೇಕು. ಅದು ಇಲ್ಲದ್ದು ಧರ್ಮವಾಗಲು ಹೇಗೆ ಸಾಧ್ಯ?" ಎಂಬುದಾಗಿದೆ.

ಜೇಡರ ದಾಸಿಮಯ್ಯನವರು ಹೇಳುತ್ತಾರೆ;

ಒಡಲುಗೊಂಡವ ಹಸಿವ ಒಡಲುಗೊಂಡವ ಹುಸಿವ
ಒಡಲುಗೊಂಡವನೆಂದು ಜಡಿದೊಮ್ಮೆ ನುಡಿಯದಿರಾ!
ನೀನೊಮ್ಮೆ ಒಡಲುಗೊಂಡು ನೋಡಾ, ರಾಮನಾಥ.

ಹಸಿವು, ತೃಷೆ, ನಿದ್ರೆ ಮುಂತಾದವುಗಳ ತೃಪ್ತಿಗಾಗಿ ಮಾನವರು ಸುಳ್ಳು ಹೇಳುವುದು, ಕೊಲ್ಲುವುದು ಮುಂತಾಗಿ ಮಾಡುತ್ತಾರೆ. ಆ ತಪ್ಪುಗಳನ್ನು ತಿದ್ದಿಕೊಳ್ಳುವುದಕ್ಕೆ ಅವಕಾಶ ನೀಡಬೇಕೇ ವಿನಾ ಆ ತಪ್ಪುಗಳಿಗಾಗಿ ವ್ಯಕ್ತಿಯ ನಾಶವನ್ನು ಬಯಸಬಾರದು. ಇದೇ ದೃಷ್ಟಿಕೋನದಿಂದ ಗುರು ಬಸವಣ್ಣನವರು ಪಾಪಿಗಳನ್ನು, ಪತಿತರಾದ ವೇಶ್ಯೆಯರನ್ನು ಪರಿವರ್ತಿಸಿ ಅವರು ಪರಿಶುದ್ಧವಾದ ಶರಣ ಜೀವನ ನಡೆಸಲು ಅನುವು ಮಾಡಿಕೊಟ್ಟರು.

ಮುನ್ನ ಮಾಡಿದ ಪಾಪ ಎಂತು ಹೋಹುದು ಎಂದು ಚಿಂತಿಸಬೇಡ
ಕಹಿ ಸೋರೆಯ ಕಾಯ ತಂದು ವಿಭೂತಿ ತುಂಬಿದಡೆ

ಸಿಹಿಯಾಗದೆ ಮೂರು ದಿವಸಕ್ಕೆ?
ಹಲವು ಕಾಲ ಕೊಂದ ಸೂನೆಗಾರನ ಕೈಯ ಕತ್ತಿಯಾದಡೇನು
ಪರುಷ ಮುಟ್ಟಲಿಕೆ ಹೊನ್ನಾಗದೆ ಅಯ್ಯಾ?
ಲಲಾಟದಲ್ಲಿ ವಿಭೂತಿ ಬರೆಯಲು ಪಾಪ ಪಲ್ಲಟವಾಗದೆ,
ಲಿಂಗದೇವಾ?

" ಈವರೆಗೂ ಅರಿತೋ ಅರಿಯದೆಯೋ ಮಾಡಿದ ಪಾಪ ಹೇಗೆ ನಿವಾರಣೆಯಾಗುವುದ ಎಂಬ ಚಿಂತೆ ಬೇಡ. ಕಹಿ ಸೋರೆಯ ಕಾಯನ್ನು ತಂದು ವಿಭೂತಿಯನ್ನು ತುಂಬಿದ ಅದು ಮೂರು ದಿವಸಕ್ಕೆ ಸಿಹಿಯಾಗುವುದು. ಹಲವು ಕೊಲೆಗಳನ್ನು ಮಾಡಿದ ಕತ್ತಿಯ ಪರುಷದ ಸಂಪರ್ಕದಿಂದ ಹೊನ್ನಾಗುವುದು. ವ್ಯಕ್ತಿಯ ಹೃದಯ ಪರಿವರ್ತನೆಯಾ ಹಣೆಯಲ್ಲಿ ವಿಭೂತಿಯ ಧಾರಣೆಯಾಗುತ್ತಲೇ ಪಾಪವು ಕರಗಿ ಹೋಗುವುದು." ಎಂ ಗುರು ಬಸವಣ್ಣನವರ ವಚನ ವಾಕ್ಯವು ಪಾಪಿ, ಪತಿತರ ಬಗ್ಗೆ ಅನುಕಂಪ ತೋರುವುದಲ್ಲ ಎಂತಹ ಪಾಪಿಗೂ ಭವಿಷ್ಯವಿದೆ ಎಂದು ಭರವಸೆ ನೀಡುತ್ತದೆ.

ಎಲವೋ ಎಲವೋ ಪಾಪ ಕರ್ಮವ ಮಾಡಿದವನೆ
ಎಲವೋ ಎಲವೋ ಬ್ರಹ್ಮಹತ್ಯವ ಮಾಡಿದವನೆ
ಒಮ್ಮೆ 'ಶರಣೆ'ನ್ನೆಲವೋ!
ಒಮ್ಮೆ 'ಶರಣೆ'ಂದಡೆ ಪಾಪಕರ್ಮ ಓಡುವುವು.
ಸರ್ವ ಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೈದಾವು:
ಒಬ್ಬಂಗೆ ಶರಣೆನ್ನು, ನಮ್ಮ ಲಿಂಗದೇವಂಗೆ!

ಈ ಮೇಲಿನ ವಚನವೂ ಕೂಡ ಪಾಪಿಯನ್ನು ಕುರಿತು ಸಹಾನುಭೂತಿ ತೋರಿ ಪಶ್ಚಾತ್ತಾಪಕ್ಕೆ ಅವಕಾಶ ನೀಡುವುದು. ಎಂತಹ ಘೋರ ಅಪರಾಧವನ್ನು ಮಾಡಿದವನಾದರೂ ಪಶ್ಚಾತ್ತಾಪ ಪಟ್ಟರೆ, ದೇವರಿಗೆ ಶರಣಾದರೆ ಅವನಿಗೆ ಕ್ಷಮೆಯುಂಟು ಪ್ರಾಯಶ್ಚಿತ್ತ ಎಂದು ಉಪವಾಸ, ತೀರ್ಥಕ್ಷೇತ್ರ ಯಾತ್ರೆ, ವಸ್ತುಗಳ ದಾನ ಮಾಡಿದ ಪ್ರಯೋಜನವಿಲ್ಲ. ಹಾಗೆ ಮಾಡುವುದಾದರೆ ಬಂಗಾರದ ಪರ್ವತವನ್ನು ಕರಗಿಸಿದರು ಆಗದು. ಪಶ್ಚಾತ್ತಾಪ ಮತ್ತು ದೈವೀ ಶರಣಾಗತಿ ಬಹಳ ಮುಖ್ಯ.

ದಯೆ ಮತ್ತು ಸಮಾಜ ಸೇವೆ

ಪ್ರೇಮ ಎನ್ನುವುದು ದೈವೀಗುಣ. ಇದಕ್ಕೆ ವಿವಿಧ ಮುಖಗಳಿವೆ. ಮಾನವ ಪ್ರೀತಿ ದೇವರ ಕಡೆ ಹರಿದಾಗ ಭಕ್ತಿ, ಹೆಂಡತಿ ಕಡೆ ಹರಿದಾಗ ಪ್ರೇಮ, ಮಕ್ಕಳ ಸಂಬಂಧದ ವಾತ್ಸಲ್ಯ ಸಮಾಜದ ಕಡೆ ಹರಿದಾಗ ಮಾನವೀಯತೆ, ಪ್ರಾಣಿಗಳ ಕಡೆ ಹರಿದಾಗ ದಯೆ ದಯೆ ಮತ್ತು ಮಾನವೀಯತೆ ಔದಾರ್ಯವನ್ನು, ದಾಸೋಹಂ ಭಾವವನ್ನು ಬೆಳೆಸುತ್ತದ ತಾನು ಗಳಿಸಿದ ಸಮಸ್ತ ಸಂಪತ್ತಿಗೂ ಲಿಂಗದೇವನೇ ಒಡೆಯ. ತಾನು ದೇವನ ದಾಸ ಸೇವಕ ಎಂಬ ದಾಸೋಹಂಭಾವವು ವೈಯಕ್ತಿಕ ಜೀವನದಲ್ಲಿ ಸರಳತೆಯನ್ನು, ಸಾಮಾಜಿ ಜೀವನದಲ್ಲಿ ಔದಾರ್ಯವನ್ನು ಬೆಳೆಸುತ್ತದೆ.

ಸೋಹಂ ಎಂದು ಜನ್ಮಜನ್ಮಕ್ಕೆ ಹೋಗಲೀಯದೆ
ದಾಸೋಹಂ ಎಂದೆನಿಸಯ್ಯ

ಎಂದು ಧರ್ಮಗುರು ಬಸವಣ್ಣನವರು ಹೇಳುವಂತೆ ಸೋಹಂ ಭಾವ ಜನ್ಮ ಜನ್ಮಾಂತರಕ್ಕೆ ಕಾರಣವಾದರೆ ದಾಸೋಹಂಭಾವವು ಭವ ಬಂಧನದಿಂದ ಬಿಡುಗಡೆ ಮಾಡುವುದು.

1. ಕನ್ನಡಿಯ ನೋಡುವ ಅಣ್ಣಗಳಿರಾ ಜಂಗಮವ ನೋಡಿರೆ
2. ಮರದ ಬಾಯಿ ಬೇರೆಂದು ತಳಕ್ಕೆ ನೀರೆರೆದಡೆ
ಮೇಲೆ ಪಲ್ಲವಿಸಿತ್ತು ನೋಡಾ
ಲಿಂಗದ ಬಾಯಿ ಜಂಗಮವೆಂದು ಪಡಿ ಪದಾರ್ಥವ ನೀಡಿದಡೆ
ಮುಂದೆ ಸಕಲ ಪದಾರ್ಥವನೀವನು

ಕೆಲವರು ಧರ್ಮವಂತಿಕೆ ಎಂದರೆ ಕೇವಲ ಪೂಜೆ ಎಂದು ಭಾವಿಸುವರು. ಅಂಥವರಿಗೆ ಗುರು ಬಸವಣ್ಣನವರು ಹೇಳುತ್ತಾರೆ, "ಇಷ್ಟಲಿಂಗ (ಕನ್ನಡಿ) ಪೂಜೆಯಲ್ಲಿಯೇ ಮೈಮರೆತ ಭಕ್ತರೇ ಸಮಾಜದ ಕಡೆಗೂ ಗಮನಕೊಡಿರಿ. ಸಮಾಜ (ಜಂಗಮ)ವು ಲಿಂಗದ ಮುಖ. ದೇವರು ನಿರಾಕಾರ ಅವನಿಗೆ ಉಣ್ಣಿಸಲು, ಉಡಿಸಲು ಬರುವುದಿಲ್ಲ. ದೇವನ ಸಾಕಾರ ಮುಖವಾದ ಸಮಾಜಕ್ಕೆ, ದೀನರಿಗೆ ಉಣ್ಣಿಸಬೇಕು, ಉಡಿಸಬೇಕು." ಗಿಡಕ್ಕೆ ಬಾಯಿ ಎಂದರೆ ಬೇರು; ಬೇರಿಗೆ ನೀರೆರೆದರೆ ಮೇಲೆ ಚಿಗುರು, ಫಲ. ಹಾಗೆ ದೇವನ ಮುಖ ಸಮಾಜ. ಅದಕ್ಕಾಗಿ ಸವೆಸುವುದೇ ದಾಸೋಹ. ಗುರು ಬಸವಣ್ಣನವರು ಜಂಗಮ ಪದವನ್ನು ಒಂಬತ್ತು ಅರ್ಥದಲ್ಲಿ ಬಳಸುತ್ತಾರೆ. ಜಂಗಮರು ಎಂದರೆ ಕೇವಲ ಸ್ವಾಮಿಗಳು, ಸನ್ಯಾಸಿಗಳಲ್ಲ; ಜಂಗಮ ದಾಸೋಹ ಎಂದರೆ ಕೇವಲ ಊಟ ಮಾಡಿಸುವುದಿಲ್ಲ. ಜಂಗಮ ದಾಸೋಹ ಎಂದರೆ ಆಧುನಿಕ ಪರಿಭಾಷೆಯಲ್ಲಿ ಸಮಾಜ ಸೇವೆ. ಗುರು ಬಸವಣ್ಣನವರು ಬೋಧಿಸಿದ ಪಂಚಾಚಾರಗಳಲ್ಲಿ ಭೃತ್ಯಾಚಾರ ಎಂಬುದು 5ನೆಯ ಆಚಾರ. ಇದು ಬೋಧಿಸುವ ಸಂದೇಶವೇನೆಂದರೆ ವ್ಯಕ್ತಿ ಕಿರಿಯ; ಸಮಾಜ ಹಿರಿದು, ವ್ಯಷ್ಟಿ ಕಿರಿದು ಸಮಷ್ಟಿ ಹಿರಿದು. ಪ್ರತಿಯೊಬ್ಬ ವ್ಯಕ್ತಿಯು ತನ್ನನ್ನು ಕಿರಿದಾಗಿ ಭಾವಿಸಿಕೊಂಡು ಸಮಾಜದ ಸೇವೆ ಮಾಡಬೇಕು. "ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ." ಇಲ್ಲಿ ನಾನು ಎಂದರೆ ವ್ಯಕ್ತಿ, ಶಿವಭಕ್ತರು ಎಂದರೆ ಸಮುದಾಯ.

ಅಹಿಂಸಾವಾದ

ದಯೆ-ಮಾನವೀಯತೆಯ ಇನ್ನೊಂದು ಮುಖ ಅಹಿಂಸಾವಾದ. ಇದಕ್ಕೆ ಎರಡು ಮುಖ.

1.ಋಣಾತ್ಮಕ – ಅಹಿಂಸೆ ಎಂದರೆ ಹಿಂಸೆಯನ್ನು ಶರೀರದಿಂದಲಾಗಲೀ, ಮಾತಿನಿಂದಲಾಗಲಿ, ಮನದಿಂದಲಾಗಲಿ ಮಾಡದಿರುವುದು.

2.ಧನಾತ್ಮಕ – ಶರೀರದಿಂದ, ಮಾತಿನಿಂದ, ಮನಸ್ಸಿನಿಂದ ಇನ್ನೊಬ್ಬರ ಹಿತಬಯಸುವುದು. ಕೇವಲ ಹೊಡೆಯುವುದು ಮಾತ್ರ ಹಿಂಸೆಯಲ್ಲ, ನಾಲಿಗೆ ಯಿಂದ ಕುಚ್ಚು ಮಾತನಾಡುವುದು. ಬೈಯುವುದು, ನಿಂದಿಸುವುದೂ ಹಿಂಸೆಯೆ!

"ಕುಟಿಲ, ಕುಹಕ, ಕ್ಷುದ್ರ, ಮಿಥ್ಯೆ ಇವನೆನ್ನ ನಾಲಿಗೆಯ ಮೇಲಿಂದ ತೆಗೆದು

ಕಳೆಯಯ್ಯ." ಎಂದು ಗುರು ಬಸವಣ್ಣನವರು ಹೇಳುತ್ತಾ ನಾಲಿಗೆ ಮಾಡುವ ಪಾಪಗಳಿವು ಎಂದು ಸೂಚ್ಯವಾಗಿ ನುಡಿಯುತ್ತಾರೆ. ಇಷ್ಟು ಮಾತ್ರವಲ್ಲ ಮನಸ್ಸಿನಿಂದ ಕೆಟ್ಟದ್ದು ಬಯಸಿದರೂ ಅದು ಪಾಪವೆ. ಅಂತರಂಗದಲ್ಲಿ ಇನ್ನೊಬ್ಬರಿಗೆ ಕೆಟ್ಟದ್ದು ಬಯಸಿದಾಗ ಹೊರಜಗತ್ತಿಗೆ ಅದು ಕಾಣದಿದ್ದರೂ ವಿಚಾರ ತರಂಗಗಳು ತನ್ನದೇ ಆದ ಪರಿಣಾಮ ಬೀರುತ್ತವೆ, ಪಾಪ ಸಂಗ್ರಹ ಮಾಡುತ್ತವೆ. ಶರೀರ, ವಾಕ್, ಮನದಿಂದ ಹಿಂಸೆ ಮಾಡದೆ ಸುಮ್ಮನಿರುವುದು ಒಳ್ಳೆಯದೇ ಆದರೂ ಅದರಿಂದ ಕ್ರಿಯಾಶೀಲ ಕೆಲಸವಾಗದು. ಆದ್ದರಿಂದ ಶರೀರದಿಂದ ಕಾಯಕ ಮತ್ತು ಸೇವೆ ಮಾಡಬೇಕು. ಒಳ್ಳೆಯ ಮಾತುಗಳಿಂದ ಇನ್ನೊಬ್ಬರ ಮನ ಒಲಿಸಬೇಕು. ಮನಸ್ಸಿನಿಂದ ಪರರ ಹಿತ ಬಯಸಬೇಕು.

"ಸಕಲ ಜೀವಾತ್ಮರಿಗೆ ಲೇಸು ಬಯಸುವವನೆ ಶರಣ"– ಗುರು ಬಸವಣ್ಣನವರು ಕೊಡುವ ಶರಣನ ವ್ಯಾಖ್ಯೆ. ಆದ್ದರಿಂದ ನಿಜ ಧರ್ಮವಂತನು ಕೇವಲ ಮಾನವರ ಹಿತವನ್ನು ಬಯಸಿದರೆ ಸಾಲದು ಪ್ರಾಣಿಗಳ ಹಿತವನ್ನೂ ಬಯಸಬೇಕು. "ಕೊಲ್ಲೆನಯ್ಯ ಪ್ರಾಣಿಗಳ, ಮೆಲ್ಲೆನಯ್ಯ ಬಾಯಿಚ್ಚೆಗೆ; ಬಲ್ಲೆನಯ್ಯ ಮುಂದೆ ತೊಡಕುಂಟೆಂಬುದ." ಎನ್ನುತ್ತಾರೆ ಗುರು ಬಸವಣ್ಣನವರು. ಧಾನ್ಯ, ಹಣ್ಣು, ತರಕಾರಿ, ಗೆಡ್ಡೆ – ಗೆಣಸು ಮುಂತಾದುವನ್ನು ದೇವರು ಕೊಟ್ಟಿರುವಾಗ ನಾಲಿಗೆಯ ಚಪಲಕ್ಕಾಗಿ ಪ್ರಾಣಿಗಳನ್ನು ಕೊಂದು ತಿನ್ನುವವರ ಬಗ್ಗೆ ಮರುಕ ವ್ಯಕ್ತ ಪಡಿಸುತ್ತಾರೆ. ಜೀವವನ್ನು ಕೊಡುವ ಶಕ್ತಿ ಇಲ್ಲದವನಿಗೆ ಜೀವವನ್ನು ತೆಗೆದುಕೊಳ್ಳುವ ಹಕ್ಕು ಇಲ್ಲ. ತನ್ನಂತೆಯೇ ಸುಖದುಃಖ ಸಂವೇದನೆ ಇರುವ ಪ್ರಾಣಿಗಳನ್ನು ಆಹಾರಕ್ಕಾಗಿ ಕೊಲ್ಲುವುದು ಪಾಪ ಎಂದು ಸಸ್ಯಾಹಾರವನ್ನು ಪ್ರೋತ್ಸಾಹಿಸುತ್ತಾರೆ. ಜಗನ್ಮಾತಾ ಅಕ್ಕಮಹಾದೇವಿ ಒಂದು ಮಾತು ಹೇಳುವರು:

ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ,
ಹಲವು ಪ್ರಾಣಿಯ ಕೊಂದು ನಲಿನಲಿದಾಡುವ
ತನ್ನ ಮನೆಯಲ್ಲೊಂದು ಶಿಶುವು ಸತ್ತೊಡೆ
ಅದಕ್ಕೆ ಮರುಗುವಂತೆ ಅವಕೇಕೆ ಮರುಗ?
ಜಾಲಗಾರನ ದುಃಖ ಜಗಕ್ಕೆಲ್ಲ ನಗೆಗೆಡೆ
ಚನ್ನಮಲ್ಲಿಕಾರ್ಜುನಯ್ಯನ ಭಕ್ತನಾಗಿರ್ದು
ಜೀವ ಹಿಂಸೆಯ ಮಾಡುವ ಮಾದಿಗರನೇನೆಂಬೆ?

ಮೀನುಗಾರನು ಬಲೆ ಬೀಸಿ ಮೀನುಗಳನ್ನು ಹಿಡಿದು, ನೀರಿನಿಂದ ಹೊರತೆಗೆದು ಸಾಯಿಸಿ ಹೆಚ್ಚಿನ ಸಂಖ್ಯೆಯಲ್ಲಿ ಮೀನು ಸಿಕ್ಕರೆ ಸಂತೋಷಿಸುವನು. ತನ್ನ ಮನೆಯಲ್ಲಿ ಒಂದು ಮಗು ಸತ್ತರೆ ಅಪಾರ ದುಃಖಪಡುವನು. ತನ್ನ ಮಗುವಿಗೆ ಮರುಗುವಂತೆ ಆ ಜೀವಿಗಳಿಗೇಕೆ ಮರುಗಬಾರದು? ಜಾಲಗಾರನ ನಡೆ ಹಾಸ್ಯಾಸ್ಪದ. ದೇವನ ಭಕ್ತರಾದವರು ದೇವಾಂಶದಿಂದ ಕೂಡಿರುವ ಪ್ರಾಣಿಗಳ ಜೀವ ತೆಗೆಯಬಾರದು.

ಆಹಾರಕ್ಕಾಗಿ ಕೆಲವರು ಪ್ರಾಣಿಗಳನ್ನು ವಧಿಸಿದರೆ, ಮತ್ತು ಕೆಲವು ಜನರು ಮಾರಿ, ಮಸಣಿ, ದುರ್ಗಿ ಮುಂತಾದ ದೇವತೆಗಳಿಗೆ ಕೋಣ, ಕುರಿ, ಕೋಳಿ

ಮುಂತಾದುವನ್ನು ಬಲಿ ಕೊಟ್ಟು ದೇವರನ್ನು ಸಂಪ್ರೀತಗೊಳಿಸುತ್ತೇವೆ ಎನ್ನುವರು. ಅಂಥವರನ್ನು ಗುರು ಬಸವಣ್ಣನವರು ಹೀಗೆ ಪ್ರಶ್ನಿಸುವರು, "ಕುರಿ ಸತ್ತು ಕಾವುದೇ ಹರಮುಳಿದವರ?" ಪ್ರಾಣಿ ಹಿಂಸೆ ಮಾಡುವುದರಿಂದ ಸೃಷ್ಟಿಕರ್ತನು ಮುನಿಯುವನು. ಹರ ಮುನಿದವನನ್ನು ಬಲಿ ತೆಗೆದುಕೊಂಡ ದೇವತೆ ಕಾಯಲು ಸಾಧ್ಯವೆ?

ಕೆಳವರ್ಗದ ಜನರದ್ದು ಕ್ರೂರ ಬಲಿಯಾದರೆ ಮೇಲ್ವರ್ಣದ ಜನರು ಮಾಡುವ ಯಜ್ಞ ಯಾಗಗಳು ಹೋತ, ಕುದುರೆ, ಆನೆ ಮುಂತಾದ ಪ್ರಾಣಿಗಳ ಜೀವಕ್ಕೆ ಮಾರಕ. ಧರ್ಮಶಾಸ್ತ್ರದ ಹೆಸರಿನಲ್ಲಿ ಮಂತ್ರಗಳನ್ನು ಹೇಳುತ್ತ "ಶಿಷ್ಟ" ರೀತಿಯಲ್ಲಿ ಯಜ್ಞ-ಯಾಗಗಳ ಮೂಲಕ ಜೀವ ಹತ್ಯೆ ಮಾಡುವುದನ್ನೂ ಗುರು ಬಸವಣ್ಣನವರು ಖಂಡಿಸುತ್ತಾರೆ.

ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು
ಎಲೆ ಹೋತೇ ಅಳು ಕಂಡಾ!
ವೇದವನೋದಿದವರ ಮುಂದೆ ಅಳು ಕಂಡಾ!
ಶಾಸ್ತ್ರವ ಕೇಳಿದವರ ಮುಂದೆ ಅಳು ಕಂಡಾ!
ನೀನತ್ತುದಕ್ಕೆ ತಕ್ಕುವ ಮಾಡುವ ನಮ್ಮ ಲಿಂಗದೇವ.

ಜೀವ ಹಿಂಸೆಯನ್ನು ಕ್ರೂರವಾಗಿಯೇ ಮಾಡಲಿ ಶಿಷ್ಟರೀತಿಯಲ್ಲೇ ಮಾಡಲಿ ಅದು ದೇವರ ಕೋಪವನ್ನು ಆಹ್ವಾನಿಸದೆ ಇರದು.

ಅರಿದರಿದು! ಸಮಗಾಣಿಸಬಾರದು;
ತ್ರಾಸಿನ ಕಟ್ಟಳೆಯಂತಿನಿತು ವೆಗ್ಗಳವಾದಡೆ
ಈಶ್ವರನು ಒಡೆಯಿಕ್ಕದೆ ಮಾಣ್ಬನೆ?
ಪಾತ್ರ ಅಪಾತ್ರವೆಂದು ಕಂಡಡೆ ಶಿವನೆಂತು ಮೆಚ್ಚುವನು?
ಜೀವ ಜೀವಾತ್ಮ ಸರಿಯೆಂದು ಕಂಡಡೆ
ಸಮವೇಧಿಸದಿಪ್ಪನೆ ಶಿವನು?
ತನ್ನ ಮನದಲ್ಲಿ 'ಯತ್ರ ಜೀವಃ ತತ್ರ ಶಿವ' ನೆಂದು
ಸರ್ವಜೀವದಯಾಪಾರಿಯಾದಡೆ ಲಿಂಗದೇವನು ಎತ್ತಿಕೊಳ್ಳದಿಪ್ಪನೆ?

ದೇವನ ಕೈಯಲ್ಲಿ ನ್ಯಾಯದ ತಕ್ಕಡಿ ಇದೆ. ಅವನು ತೂಗಿ ತೂಗಿ ಫಲವನ್ನು ಕೊಡುವನು. ಎಲ್ಲಿ ಜೀವ (Life) ಇದೆಯೋ ಅಲ್ಲಿ ಶಿವ (God) ನಿದ್ದಾನೆ ಎಂದು ಭಾವಿಸಬೇಕು; ಸರ್ವಜೀವದಯಾಪಾರಿಯಾಗಬೇಕು.

ಬೆಟ್ಟದ ಮೇಲಣ ಗಿಡಗಳು ಬೆಟ್ಟವ ಮುಟ್ಟದಂತಿಪ್ಪವೆ?
ವಿವರಿಸಿ ನೋಡಿದಡೆ ಸೃಷ್ಟಿಯೊಳಗಣ ಪ್ರಾಣಿಗಳು
ಪರಮನ ಮುಟ್ಟದಿಪ್ಪವೆ?
ಕಷ್ಟರು ಬೇಡವೆಂದು ಬಿಟ್ಟೋಡುತಿಪ್ಪ ಪ್ರಾಣಿಗಳನಟ್ಟಿ ಹಿಡಿದು ಕೊಂದರೆ,
ಪ್ರತಿಷ್ಠಿಸಿದೀಶ್ವರನಿಕ್ಕದಿರ್ಪನೇ ನರಕದಲ್ಲಿ?
ಒಡೆಯರಿಲ್ಲೆಂದು ಹಲವು ಪ್ರಾಣಿಗಳ ಹರಿಹರಿದು ಕೊಂದರೆ,

ಹರನಿಕ್ಕದಿಪ್ಪನೇ ಅಘೋರ ನರಕದಲ್ಲಿ?
ಸಕಲ ಪ್ರಾಣಿಗಳಿಗೆ ಮೇಲಾರೈಕೆ ನಮ್ಮ
ಸಕಳೇಶ್ವರನಲ್ಲದೆ ಮತ್ತೊಬ್ಬರುಂಟೆ?

ಒಂದು ಗಿಡವನ್ನು ಕಿತ್ತಾಗ ಭೂಮಿ ಹೇಗೆ ಕದಲುವುದೋ ಹಾಗೆ ಜೀವಕ್ಕೆ ಹಿಂಸೆಯಾದಾಗ ದೇವನಿಗೆ ನೋವಾಗುವುದು. ಏಕೆಂದರೆ ದೇವನೆ ಎಲ್ಲ ಜೀವಿಗಳ ಒಡೆಯ. ಮಾನವೀಯ ಮೌಲ್ಯಗಳ ಜೊತೆ ನಂಟು ಹೊಂದಿರುವುದು ಸಾತ್ವಿಕ ಆಹಾರ ಪದ್ಧತಿ. ಬೆಳೆಯನ್ನು ಬೆಳೆಸುತ್ತ ಅದರಿಂದ ಬದುಕನ್ನು ಹೊರೆದುಕೊಳ್ಳಬೇಕು. ಆಹಾರದಂತೆ ವಿಹಾರ, ವಿಹಾರದಂತೆ ವಿಚಾರ. ಆಹಾರ-ವಿಹಾರ-ವಿಚಾರ ಮೂರೂ ಶುದ್ಧವಾದಾಗ ಬದುಕು ನಿರ್ಮಲ. ಜೀವನ ದೇವರು ಕೊಟ್ಟ ವರ, ಬದುಕುವುದು ಒಂದು ಕಲೆ. ಉಣ್ಣುವುದು ಪ್ರಸಾದವಾಗಬೇಕಾದರೆ ಅಲ್ಲಿ ಪರಿಶುದ್ಧತೆ ಬಲುಮುಖ್ಯ. ಪರಿಶುದ್ಧ ಜೀವನಕ್ಕೆ ತಳಪಾಯ ಸಾತ್ವಿಕ ಆಹಾರ, ಸಂಯಮ ಸಹಿತ ನಡತೆ. ಗುರು ಬಸವಣ್ಣನವರು ಮಾನವ ಹಕ್ಕುಗಳಿಗಾಗಿ ಹೋರಾಡಿದ ಪ್ರಥಮ ಸಮಾಜ ಸುಧಾರಕರು ಮಾತ್ರವಲ್ಲ ಪ್ರಾಣಿಗಳ ಜೀವಿಸುವ ಹಕ್ಕನ್ನೂ ಪ್ರತಿಪಾದಿಸಿದರು. ಈ ಮಾನವೀಯತೆಗೆ ಪ್ರೇರಣೆ ಏನು? ಇದಕ್ಕೆ ಜೇಡರ ದಾಸಿಮಯ್ಯ ಶರಣರು ಉತ್ತರ ಕೊಡುತ್ತಾರೆ.

ಮಣಿಗಳ ಸೂತ್ರದಂತೆ ತ್ರಿನಯನ ನೀನಿಪ್ಪೆಯಯ್ಯ
ಎಣಿಸುವೊಡೆ ತನು ಭಿನ್ನ । ಆತ್ಮ ಒಂದೇ
ಅಣುರೇಣು ಮಧ್ಯದಲ್ಲಿ ಗುಣಭರಿತ ನೀನೆಂದು
ಮಣಿವುತ್ತಿಪ್ಪೆನಯ್ಯ ರಾಮನಾಥ ॥
ನಾನೊಂದು ಸುರಗಿಯ ಏನೆಂದು ಇರಿವೆನು
ಏನ ಕಿತ್ತು ಏನನಿರಿವೆನು?
ಜಗವೆಲ್ಲ ನೀನೆಯಾಗಿಪ್ಪೆ ಕಾಣಾ ರಾಮನಾಥ ॥

ಒಂದು ಮಣಿ ಸರದಲ್ಲಿ ಮಣಿಗಳು ಹಲವಿದ್ದರೂ ದಾರ ಮಾತ್ರ ಒಂದೇ ಇರುವಂತೆ, ಜೀವಾತ್ಮರುಗಳ ಶರೀರ ಹಲವಿದ್ದರೂ ಎಲ್ಲರ ಮಧ್ಯೆ ಹರಿಯುವ ದೇವಚೈತನ್ಯ ಒಂದೆ! ಅದಕ್ಕೆ ಆನು ನಮಿಸುತ್ತೇನೆ."

"ಕತ್ತಿಯನ್ನು ಹಾಕಿ ಯಾರನ್ನು ಇರಿಯಲಿ? ಜಗದೊಳಗೆಲ್ಲ ನೀನೇ ತುಂಬಿರುವೆ ದೇವಾ." ಹೀಗೆ ಎಲ್ಲ ಮಾನವರಲ್ಲಿ, ಪ್ರಾಣಿಗಳಲ್ಲಿ ಹರಿಯುವ ದೇವಚೈತನ್ಯದ ಕಾರಣ ವ್ಯಕ್ತಿಯು ಮಾನವೀಯ ವರ್ತನೆಗಳನ್ನು, ಭಾವವನ್ನು ಬೆಳೆಸಿಕೊಳ್ಳಬೇಕು ಎಂಬುದೇ ವಚನಕಾರರ ಆಶಯ.

****

ಓದುಗರಿಗೆ ವಿಶೇಷ ಸೂಚನೆ

ನೀವು ಉತ್ತಮ ಚಿಂತಕರು ಹಾಗೂ ಲೇಖಕರಾಗಿದ್ದರೆ ವಿಶೇಷ ಲೇಖನಗಳನ್ನು ನುಡಿಯಲ್ಲಿ ಡಿಟಿಪಿ ಮಾಡಿ basavakumaraswamiji@gmail.com, kalyana.kirana1134@gmail.com ಮೇಲ್‌ಗೆ ಕಳುಹಿಸಿ

ದಲಿತೋದ್ಧಾರಕರು

ವಿಶ್ವಗುರು ಬಸವಣ್ಣನವರು ಮತ್ತು ಡಾ॥ ಅಂಬೇಡ್ಕರ್

– ಸದಾನಂದ ಹತ್ಯಾಳ

ಈಗಷ್ಟೇ ನಾವು ಡಾ॥ಅಂಬೇಡ್ಕರರ126ನೇ ಜನ್ಮೋತ್ಸವವನ್ನು ಆಚರಿಸಿದ್ದೇವೆ. ಹಾಗೇ ನಾವು ಈಗ ಬಸವಣ್ಣನವರ ಜಯಂತಿಯನ್ನು (ಅವರ ಜೀವಿತಾವಧಿಯು 12ನೇ ಶತಮಾನವೆಂದು ಪರಿಗಣಿಸಲಾಗಿ) 884ನೆಯ ಜಯಂತಿಯನ್ನು ಆಚರಿಸಿದ್ದೇವೆ. ಬಸವೇಶ್ವರರ ಜೀವಿತಾವಧಿಯು 11ನೇ ಶತಮಾನದ್ದೆಂದು ಹೊಸ ಚಿಂತನೆಯು ಶುರುವಾಗಿದೆ. ಅದರ ಪ್ರಕಾರ ಅವರ ಜಯಂತಿಯು 989ನೆಯದು ಆಗುತ್ತದೆ. ಆದರೆ ನನ್ನ ಲೇಖನವು ಅವರ ಎಷ್ಟನೆಯ ಜಯಂತಿ ಎಂದು ಅಲ್ಲ.

ಬಸವಣ್ಣನವರ ಕಾಲದಲ್ಲಿ ಸಮಾಜದ ಕಟ್ಟುಪಾಡುಗಳು ಬಹಳ ಇದ್ದವು. ಅಂದು 'ವರ್ಣಾಶ್ರಮ' ಪದ್ದತಿಯ ಕಾಲವಾಗಿತ್ತು. ಈಗಲೂ ಅದು ಮುಂದುವರೆದುಕೊಂಡು ಬಂದಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಬಸವಣ್ಣನವರು ಅಂದಿನ ದಲಿತ ಮತ್ತು ಕೆಳಸ್ಥರದ ಶೋಷಿತ ವರ್ಗಗಳ ಪರವಾಗಿ ಹೋರಾಡಿದ ವ್ಯಕ್ತಿ ಎಂದರೆ ತಪ್ಪಾಗಲಾರದು. ಅವರು ಕಟ್ಟಿದ"ಅನುಭವ ಮಂಟಪ"ದಲ್ಲಿ ಮುಕ್ಕಾಲು ಪಾಲು ಶೋಷಿತ, ದಲಿತ, ಹಿಂದುಳಿದ ವರ್ಗದವರೇ ಆಗಿದ್ದರು. ಅವರುಗಳೆಂದರೇ ಮಡಿವಾಳ ಮಾಚಿದೇವ, ಡೋಹರಕಕ್ಕಯ್ಯ, ಅಂಬಿಗರ ಚೌಡಯ್ಯ, ಕುಂಬಾರಗುಂಡಯ್ಯ, ಹಡಪದಅಪ್ಪಣ್ಣ ಹಾಗೂ ಮಾದಾರಚನ್ನಯ್ಯ ಇತ್ಯಾದಿ. ಬಸವಣ್ಣನವರ ಆಪ್ತ ಕಾರ್ಯದರ್ಶಿ(Personal Secretary) 'ಹಡಪದ ಅಪ್ಪಣ್ಣ'ರವರಾಗಿದ್ದರು. ಅಂದರೆ ಅವರು ಈ ಶೋಷಿತ ವರ್ಗಕ್ಕೆ ಎಷ್ಟು ಗೌರವ ಕೊಡುತ್ತಿದ್ದರೆಂದು ತಿಳಿಯುತ್ತದೆ. ಅನುಭವ ಮಂಟಪದಎಲ್ಲ ಸದಸ್ಯರು ವಚನಕಾರರೇ.ಅಂದಿನ ಬರೆಯುವ ಭಾಷೆ ಸಂಸ್ಕೃತವಾಗಿತ್ತು. ಜನಸಾಮಾನ್ಯರಿಗೆ ಈ ಸಂಸ್ಕೃತದ ಜ್ಞಾನವು ಅಷ್ಟೊಂದು ಇರಲಿಲ್ಲ ಹಾಗೂ ತಿಳಿಯುತ್ತಿರಲಿಲ್ಲ. ಆದ್ದರಿಂದ ಶಿವಶರಣರು ಜನಸಾಮಾನ್ಯರ ಭಾಷೆಯಾದ ಕನ್ನಡದಲ್ಲಿಯೇ ತಮ್ಮ ವಚಗಳನ್ನು ಬರೆದರು. ಅದರಲ್ಲಿ ಬಸವಣ್ಣ ನವರಿಗೆ ಪ್ರಮುಖ ಸ್ಥಾನ. ಅನುಭವ ಮಂಟಪದ ಅಧ್ಯಕ್ಷರಾಗಿ ಅಲ್ಲಮ ಪ್ರಭುಗಳು, ಕಾರ್ಯದರ್ಶಿಗಳಾಗಿ ಬಸವಣ್ಣನವರು ಮತ್ತು ಚಿನ್ಮಯಜ್ಞಾನಿಯಾಗಿ ಚನ್ನಬಸವಣ್ಣ ಮತ್ತು ಮಹಿಳಾ ವಚನಕಾರಳಲ್ಲಿ ಅಕ್ಕಮಹಾದೇವಿ ಅಗ್ರಸ್ಥಾನದಲ್ಲಿ ನಿಲ್ಲುತ್ತಾರೆ. ಬಸವಣ್ಣನವರು ಉಚ್ಛಕುಲದಲ್ಲಿ ಜನ್ಮತಳೆದವಾದರೂ ಅವರ ವಚನ ಮತ್ತು ತತ್ವಗಳಾನುಸಾರವಾಗಿ ಎಲ್ಲರೂ ಸರಿಸಮಾನರು ಎಂದು, ಯಾರು ಹೆಚ್ಚಿನವರಲ್ಲ ಯಾರು ಕೀಳರಲ್ಲ ಎನ್ನುವದು ಅವರ ಧ್ಯೇಯವಾಗಿತ್ತು. ಇದರ ಬಗ್ಗೆ ಅವರೇ ತಮ್ಮ ವಚನದಲ್ಲಿ ಹೀಗೆ ಹೇಳುತ್ತಾರೆ.

"ಸಿರಿಯಾಳನನ್ನು ಶೆಟ್ಟಿ ಎಂದರೇ?
ಮಾಚಯ್ಯನನ್ನು ಮಡಿವಾಳನೆಂದರೇ?

ಕಕ್ಕಯ್ಯನನ್ನುಡೋಹರನೆಂದರೇ?
ಚನ್ನಯ್ಯನನ್ನು ಮಾದಾರನೆಂದರೇ?
ನಾನು ಬ್ರಾಹ್ಮಣನೆಂದರೇ?ಕೂಡಲ ಸಂಗಯ್ಯನು ನಗುವನಯ್ಯ"

ಈ ವಚನದಿಂದ ವ್ಯಕ್ತವಾಗುವುದು ಏನೆಂದರೆ ಅವರು ಕೆಳಸ್ಥರ ವ್ಯಕ್ತಿಗಳಲ್ಲಿ ಎಷ್ಟು ಆಸಕ್ತಿಯನ್ನು ಇಟ್ಟು ನಾವೆಲ್ಲರೂ ಸರಿಸಮಾನರೆಂದು ಅರ್ಥೈಸುತ್ತಿದ್ದರು.

ಶರಣ ಹರಳಯ್ಯನ ಮಗನಾದ ಶೀಲವಂತನಿಗೆ, ಮಧುವಯ್ಯನ ಮಗಳಾದ ನೀಲಾಳನ್ನು ತಂದುಕೊಂಡು ಮದುವೆಯನ್ನು ಮಾಡುವರು.ಇದು ಅಂತರ–ಜಾತಿಯ ವಿವಾಹವಾಗಿತ್ತು. ಯಾಕೆಂದರೆ ಹರಳಯ್ಯನು ಚಮಗಾರ ಕೆಲಸದವನು, ಮಧುವಯ್ಯ ಬ್ರಾಹ್ಮಣನು. ಈ ವಿಷಯವು ಕಲ್ಯಾಣ ರಾಜ್ಯದ ರಾಜನಾದ ಬಿಜ್ಜಳನಿಗೆ ತಿಳಿಯುತ್ತದೆ. ಪ್ರಧಾನ ಮಂತ್ರಿಗಳಾದ ಬಸವಣ್ಣನವರನ್ನು ಕರೆದು ಕೇಳುತ್ತಾರೆ 'ಬಸವಣ್ಣನವರೇ ಈ ವಿವಾಹವನ್ನು ಎಕೇ ಮಾಡಿಸಿದಿರಿ? ಇದು ವರ್ಣಾಶ್ರಮದ ವಿರುದ್ಧ ಅಲ್ಲವೆ'? ಎಂದು ಕೇಳುವರು.ಆಗ ಬಸವಣ್ಣನವರು' ಅವರಿಬ್ಬರು ಈಗ ಲಿಂಗವಂತರಾಗಿದ್ದಾರೆ ಮತ್ತು ಅವರ ಮೊದಲಿನ ಜಾತಿಗಳನ್ನು ಬಿಟ್ಟಿದ್ದಾರೆ'ಎಂದು ಹೇಳುವರು. ನಂತರದಲ್ಲಿ ಈ ವಿಷಯವಾಗಿ ಕಲ್ಯಾಣದಲ್ಲಿ ಕ್ರಾಂತಿ ಶುರುವಾಗಿ ಬಸವಣ್ಣನವರ ಸಹಿತ ಎಲ್ಲ ಶರಣರಿಗೆ' ಗಡಿಪಾರು ಆದೇಶ'ವಾಗುತ್ತದೆ. ಹರಳಯ್ಯ, ಮಧುವಯ್ಯ ಮತ್ತು ಮದುಮಕ್ಕಳಾದ ಶೀಲವಂತ, ನೀಲಾರಿಗೆ 'ಆನೆ ಹೂಟ'ಶಿಕ್ಷೆ ಯಾಗುತ್ತದೆ. ಬಸವಣ್ಣನವರು ಕೂಡಲಸಂಗಮಕ್ಕೆ ತೆರಳಿ ಐಕ್ಯವಾಗುತ್ತಾರೆ.ಚನ್ನಬಸವಣ್ಣನವರು ವಚನ ಸಾಹಿತ್ಯಗಳ ಓಲೆಗಳನ್ನು ತೆಗೆದುಕೊಂಡು ಮೂರುಸಾವಿರ ಶರಣರೊಂದಿಗೆ ಹುಬ್ಬಳ್ಳಿಯ ಮಾರ್ಗವಾಗಿ 'ಉಳವಿ'(ಈಗಿನ ಉತ್ತರ ಕನ್ನಡ ಜಿಲ್ಲೆಯ ಜೊಯಾಡ ತಾಲುಕಿನಲ್ಲಿ ಬರುತ್ತದೆ) ಗೆ ಹೋಗಿ, ಕೆಲಕಾಲದ ನಂತರ ಐಕ್ಯವಾಗುತ್ತಾರೆ. ಅಂದರೆ ಬಸವಣ್ಣನವರು ವರ್ಣಾಶ್ರಮದ ವಿರುದ್ದ ಹೋರಾಡಿ ಎಲ್ಲರೂ ಸರಿಸಮಾನರು ಎಂದು ಹೇಳಿದರು.

ಇನ್ನು ಡಾ॥ ಬಾಬಾಸಾಹೇಬ ಅಂಬೇಡ್ಕರರು ತಮ್ಮ ವಿದೇಶ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಭಾರತಕ್ಕೆ ಬಂದಾಗ ಸ್ವಾತಂತ್ರ್ಯ ಸಂಗ್ರಾಮದ ಪಕ್ವಕಾಲ.ಆಗ ಅಂಬೇಡ್ಕರರು ಮಹಾತ್ಮ ಗಾಂಧೀಜಿಯವರನ್ನು ಭೇಟಿ ಮಾಡಿ ದಲಿತರ ಬಗ್ಗೆ ಇರುವ ಕಳಕಳಿಯ ಬಗ್ಗೆ ಚರ್ಚಿಸಿದರು.ಆಗ ಇವರಿಬ್ಬರಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗುತ್ತವೆ. ಅಲ್ಲಿಂದತಮ್ಮಊರಿಗೆ ಮರಳುವರು. ನಂತರಕಾಲೇಜಿನಲ್ಲಿಉಪನ್ಯಾಸಕನಾಗಬೇಕೆಂಬ ಬಯಕೆಯಿಂದ ಹುಬ್ಬಳ್ಳಿಗೆ ಬಂದು ಅಲ್ಲಿನ ಕಾಲೇಜಿಗೆ ಸಂದರ್ಶನಕ್ಕಾಗಿ ಸಾಲಿನಲ್ಲಿ ನಿಂತಿರುತ್ತಾರೆ. ಇದನ್ನು ಸ್ಥಳೀಯ ಪ್ರಭಾವಿ ವ್ಯಕ್ತಿಯಾದ 'ಸರ್.ಸಿದ್ದಪ್ಪ ಕಂಬಳಿ'ಯವರು ನೋಡುತ್ತಾರೆ. ಅವರೇ ಖುದ್ದಾಗಿ ಅಂಬೇಡ್ಕರರ ಹತ್ತಿರ ಬಂದು'ಅಂಬೇಡ್ಕರರೆ ನಿಮ್ಮಿಂದ ದೇಶಕ್ಕೆ ಇನ್ನೂ ಒಳ್ಳೆಯ ಕಾರ್ಯವಾಗಬೇಕಾಗಿದೆ. ಈ ಉಪನ್ಯಾಸಕನ ಕೆಲಸ 'ಬೇಡ'ಎಂದು ಕರೆದು'ನೀವು ಗಾಂಧೀಜಿಯವರ ಪಕ್ಕದಲ್ಲಿ ಇದ್ದುಕೊಂಡೇ ದಲಿತರ ಮತ್ತು ಹಿಂದುಳಿದ ವರ್ಗದವರ

ಏಳಿಗೆಗಾಗಿ ಶ್ರಮಿಸಿ' ಎಂದು ಹೇಳುತ್ತಾರೆ. ನಂತರದ ದಿವಸಗಳಲ್ಲಿ ಗಾಂಧೀಜಿಯವರು ಇವರಿಗೆ ಭಾರತದ'ಸಂವಿಧಾನ'ವನ್ನು ಬರೆಯಲಿಕ್ಕೆ ಹೇಳುತ್ತಾರೆ. ಸಂವಿಧಾನವನ್ನು ಬರೆದು 'ಸಂವಿಧಾನ ಶಿಲ್ಪಿ'ಯಾಗುತ್ತಾರೆ. ಅದು ಜನವರಿ ಇಪ್ಪತ್ತಾರು, 1950ರಂದು ಜಾರಿಗೆ ಬಂದು ಭಾರತವು'ಗಣರಾಜ್ಯ' ವಾಗುತ್ತದೆ. ಹಾಗೂ ಇವರು ಸ್ವತಂತ್ರ ಭಾರತದ ಪ್ರಥಮ ಕಾನೂನಿನ ಮಂತ್ರಿಗಳಾಗುತ್ತಾರೆ.

ಇನ್ನೊಂದು ಸನ್ನಿವೇಶ, ಇವರಿಗೆ ದಿ॥ ಶ್ರೀ ಎಸ್. ನಿಜಲಿಂಗಪ್ಪನವರ ಭೇಟಿಯಾಗುತ್ತಾರೆ. ಆಗ ನಿಜಲಿಂಗಪ್ಪನವರು ಎರಡು ಬಸವಣ್ಣನವರ ವಚನವನ್ನು ಹೇಳುತ್ತಾರೆ.

'ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ,
ತನ್ನ ಬಣ್ಣಿಸಬೇಡ, ಇದಿರು ಹಳಿಯಲುಬೇಡ,
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ನಮ್ಮಕೂಡಲ ಸಂಗಮನೊಲಿಸುವ ಪರಿ.'

'ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯ,
ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯ,
ಕೂಡಲ ಸಂಗಮದೇವ ನಿಮ್ಮ ಮನೆಯ ಮಗನೆಂದೆನಿಸಯ್ಯ.'

ಇವುಗಳ ಅರ್ಥವನ್ನುಇಂಗ್ಲೀಷಿನಲ್ಲಿ ಭಾಷಾಂತರ ಮಾಡಿ ಹೇಳಲು ಅಂಬೇಡ್ಕರವರು ಮನಸಾರೇ ಒಪ್ಪಿ 'ಅರೇ ಬಸವತತ್ವಗಳಲ್ಲಿ ಇಷ್ಟೊಂದು ವಿಚಾರಗಳು ಅಡಕವಾಗಿವೆ ಎಂದು ಮೊದಲೇ ತಿಳಿದಿದ್ದರೇ ನಾನು ಬೌದ್ದಿ (Bhuddist)ಯಾಗುತ್ತಿರಲಿಲ್ಲ'ಎಂದು ಹೇಳುತ್ತಾರೆ.

ಅಂದರೆ ಅಂಬೇಡ್ಕರರು ದಲಿತ ಮತ್ತು ಹಿಂದುಳಿದ ವರ್ಗಗಳ ಆರ್ಥಿಕ ಮತ್ತು ರಾಜಕೀಯ ಸ್ವಾಂತಂತ್ರಗಳಿಗೆ ಹೋರಾಡಿದರೇ, ಬಸವಣ್ಣನವರು ಈ ವರ್ಗದವರನ್ನು ಸಾಮಾಜಿಕವಾಗಿ ಮತ್ತು ಅಧ್ಯಾತ್ಮಿಕವಾಗಿ ಮೇಲೆತ್ತುವ ಪ್ರಯತ್ನ ಮಾಡಿದ್ದಾರೆ. ಹೀಗೆ ಅಂಬೇಡ್ಕರರ ಮತ್ತು ಬಸವಣ್ಣನವರ ಧ್ಯೇಯ್ಯೋದ್ದೇಶಗಳು ಒಂದೆಯಾಗಿದ್ದವು.ಆದ್ದರಿಂದ ಇವರಿಬ್ಬರು ದಲಿತೋದ್ದಾರಕರಾಗಿದ್ದರು.

ಈಗಾಗಲೆ ಎಲ್ಲ ಸರಕಾರಿ ಕಛೇರಿಗಳಲ್ಲಿ ಅಂಬೇಡ್ಕರರ ಭಾವ ಚಿತ್ರಗಳನ್ನು ಹಾಕಿದ್ದಾರೆ.ಈ ಸಲದ ಬಸವ ಜಯಂತಿ ದಿವಸದಂದು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ವಿಶ್ವಗುರು ಬಸವಣ್ಣನವರ ಭಾವ ಚಿತ್ರಗಳನ್ನು ಎಲ್ಲಾ ಸರಕಾರಿ ಕಛೇರಿಗಳಲ್ಲಿ ಹಾಕಲು ಆದೇಶಿಸಿದ್ದಾರೆ.ಅಂಬೇಡ್ಕರ್ ಮತ್ತು ಗುರುಬಸವಣ್ಣನವರ ಭಾವಚಿತ್ರಗಳನ್ನು ಇನ್ನು ಮುಂದೆ ಒಟ್ಟಾಗಿ ನೋಡಲು ನಮ್ಮೆಲ್ಲರಿಗೂ ಹೆಮ್ಮೆ ಎನಿಸುತ್ತದೆ.

****

ಲಿಂಗಾಯತ ಧರ್ಮದ ಮಾನ್ಯತೆಗಾಗಿ ಮುಖ್ಯಮಂತ್ರಿಗಳಿಗೆ ನೀಡಿದ ಮನವಿಗೆ,

ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು
ಮಾನ್ಯ ಮುಖ್ಯಮಂತ್ರಿಗಳು
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ : ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲು ಮನವಿ.

ತಮ್ಮಲ್ಲಿ ಈ ಮೂಲಕ ಕೇಳಿಕೊಳ್ಳುವದೇನೆಂದರೆ, ಇತ್ತೀಚಿಗೆ ವೀರಶೈವ ಮಹಾಸಭಾದವರು ಏರ್ಪಡಿಸಿದ್ದ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡುತ್ತ, ಲಿಂಗಾಯತ ಧರ್ಮಕ್ಕೆ ಸಾಂವಿಧಾನಿಕ ಮಾನ್ಯತೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವುದಾಗಿ ಹೇಳಿದ್ದೀರಿ. ಅದಕ್ಕಾಗಿ ತಮಗೆ ಹೃತ್ಪೂರ್ವಕ ಅಭಿನಂದನೆ ಸಲ್ಲಿಸುತ್ತೇವೆ. ವೀರಶೈವ-ಲಿಂಗಾಯತ ಎಂಬ ಗೊಂದಲ ನಿವಾರಿಸಿಕೊಂಡು ಒಂದು ನಿರ್ಣಯಕ್ಕೆ ಬಂದರೆ, ಖಂಡಿತವಾಗಿಯೂ ಶಿಫಾರಸು ಮಾಡುವುದಾಗಿ ತಾವು ಹೇಳಿದ್ದು ಅತ್ಯಂತ ಸೂಕ್ತವಾದ ಸಲಹೆಯಾಗಿದೆ.

ಕರ್ನಾಟಕದಲ್ಲಿ ಯಾರೂ ವೀರಶೈವರಿಲ್ಲ, ಇರುವವರೆಲ್ಲ ಲಿಂಗಾಯತರೆ. ತಮಿಳುನಾಡು, ಕೇರಳ ಮತ್ತು ಪಾಂಡಿಚೇರಿ ಗಡಿಭಾಗದಲ್ಲಿ ಮಾತ್ರ ವೀರಶೈವರಿದ್ದಾರೆ. ವಾಸ್ತವಿಕವಾಗಿ ನೋಡಿದರೆ ಕರ್ನಾಟಕದಲ್ಲಿ ಯಾರೂ ವೀರಶೈವರಿಲ್ಲ. ಇರುವವರೆಲ್ಲರೂ ಲಿಂಗಾಯತ ಧರ್ಮದ ಅನುಯಾಯಿಗಳೇ ಆಗಿದ್ದಾರೆ. 12ನೇ ಶತಮಾನದಲ್ಲಿ ಮಹಾಮಾನವತಾವಾದಿ ವಿಶ್ವಗುರು ಬಸವಣ್ಣನವರ ನೇತೃತ್ವದಲ್ಲಿ ವಿವಿಧ ಜಾತಿ, ಮತ, ಪಂಥ, ಪಂಗಡಗಳ 770 ಜನ ಶರಣರು ಅನುಭವ ಮಂಟಪದ ಮೂಲಕ ನೀಡಿರುವ, ಕನ್ನಡಿಗರೇ ಸ್ಥಾಪಿಸಿದ ಏಕೈಕ ಧರ್ಮ ಲಿಂಗಾಯತ. ವಿಶ್ವಗುರು ಬಸವಣ್ಣನವರು ಸಂಶೋಧಿಸಿಕೊಟ್ಟ ಇಷ್ಟಲಿಂಗವು ಸಮಾನತೆಯ ಕುರುಹಾಗಿ ಎಲ್ಲ ಜಾತಿ-ಮತ-ಪಂಥದವರನ್ನು ಬೆಸೆಯಿತು. ಹೀಗಾಗಿ ಇವತ್ತಿಗೂ ಸಹ ಲಿಂಗಾಯತ ಸಮಾಜದಲ್ಲಿ 71 ಒಳಪಂಗಡಗಳಿವೆ. ಗುರುವಿನಿಂದ ದೀಕ್ಷೆ ಪಡೆದು ಇಷ್ಟಲಿಂಗ ಧರಿಸಿದರೆ ಯಾವುದೇ ಜಾತಿಯವರಾಗಲಿ ಲಿಂಗಾಯತರಾಗುತ್ತಾರೆ. ಅಂತೆಯೇ ನಟುವರ ಜಾತಿಯ ಅಲ್ಲಮ ಪ್ರಭುದೇವರನ್ನು ಶೂನ್ಯಪೀಠದ ಪ್ರಥಮ ಜಗದ್ಗುರುವನ್ನಾಗಿ ಗುರು ಬಸವಣ್ಣನವರು ನೇಮಕ ಮಾಡಿದರು.

ಸಮಗಾರ ಹರಳಯ್ಯ, ಕುರುಬ ಗೊಲ್ಲಾಳೇಶ್ವರ, ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ, ಮಾದಾರ ಚನ್ನಯ್ಯ, ಹೊಲೆಯ ನಾಗಿದೇವ, ಮೋಳಿಗೆ ಮಾರಯ್ಯ-

ಮಹಾದೇವಮ್ಮ, ಮರುಳು ಶಂಕರದೇವ, ತುರುಗಾಹಿ ರಾಮಣ್ಣ ಮುಂತಾದ ಅಮರಗಣಂಗಳನ್ನು ಗುರು ಬಸವಣ್ಣನವರು ರೂಪಿಸಿದರು.

ಪುರೋಹಿತ ಶಾಹಿ ಹಾಗೂ ವರ್ಣಾಶ್ರಮದ ವೈದಿಕ ವ್ಯವಸ್ಥೆ, ಜಾತೀಯತೆ ಮತ್ತು ಅಸ್ಪೃಶ್ಯತೆಯ ವಿರುದ್ಧ ಸಿಡಿದೆದ್ದ ಶ್ರೀ ಗುರು ಬಸವಣ್ಣನವರಿಗೆ ಶೋಷಣೆಗೆ ಒಳಗಾದ ಜನಾಂಗಗಳೇ ಪ್ರೋತ್ಸಾಹ ನೀಡಿದವಲ್ಲದೆ, ದಲಿತರು ಮತ್ತು ಅಸ್ಪೃಶ್ಯರೆಲ್ಲರೂ ತಂಡೋಪ ತಂಡವಾಗಿ ಬಂದು ಸಂತೋಷದಿಂದ ಗುರು ಬಸವಣ್ಣನವರ ಧರ್ಮವನ್ನು ಸ್ವೀಕರಿಸಿದರು. ಆದ್ದರಿಂದ ಲಿಂಗಾಯತ ಧರ್ಮವು ದೀನ-ದಲಿತರು ಮತ್ತು ಅಸ್ಪೃಶ್ಯರಿಗಾಗಿ ಕೊಡಲ್ಪಟ್ಟ ಧರ್ಮ ಎಂಬುದನ್ನು ತಾವು ಅರಿತವರಾಗಿದ್ದೀರೆಂದು ನಾವು ಭಾವಿಸಿದ್ದೇವೆ.

ವೀರಶೈವ ಮಹಾಸಭಾ ಲಿಂಗಾಯತರ ಪ್ರಾತಿನಿಧಿಕ ಸಂಸ್ಥೆಯಲ್ಲ

ವೀರಶೈವ ಮಹಾಸಭಾ ಎಲ್ಲ ಲಿಂಗಾಯತರ ಪ್ರಾತಿನಿಧಿಕ ಸಂಸ್ಥೆಯಲ್ಲ. ಅಖಿಲ ಭಾರತ ವೀರಶೈವ ಮಹಾಸಭಾ ಕೇವಲ ವೀರಶೈವ ಪಂಥದ ಸಂಸ್ಥೆಯಾಗಿದ್ದು ಎಲ್ಲ ಬಸವಾನುಯಾಯಿಗಳ ಪ್ರಾತಿನಿಧಿಕ ಸಂಸ್ಥೆಯಲ್ಲ. ಲಿಂಗಾಯತ ಸಮುದಾಯದಲ್ಲಿ 71 ಒಳ ಪಂಗಡಗಳಿವೆ. ಆದ್ದರಿಂದ ಲಿಂಗಾಯತ ಬಳಸುವುದು ಸೂಕ್ತ. ಒಂದು ವೇಳೆ ವೀರಶೈವ ಮಹಾಸಭಾದವರು ಕೇಳುವುದಾದರೆ, ವೀರಶೈವಕ್ಕೆ ಪ್ರತ್ಯೇಕ ಮಾನ್ಯತೆ ಕೇಳಲಿ. ಲಿಂಗಾಯತದೊಂದಿಗೆ ವೀರಶೈವ ಪದವನ್ನು ಕೂಡಿಸಿ ಹೇಳಬಾರದೆಂದು ನಾವು ಆಗ್ರಹಿಸುತ್ತೇವೆ.

ಲಿಂಗಾಯತ ಮತ್ತು ವೀರಶೈವ ಬೇರೆ ಬೇರೆ

ವಿಶ್ವಗುರು ಬಸವಣ್ಣವರಿಂದ ಸ್ಥಾಪಿಸಲ್ಪಟ್ಟ ಅನುಭವ ಮಂಟಪದ ಮೂಲಕ ಹುಟ್ಟಿದ ಧರ್ಮ "ಸ್ವತಂತ್ರ ಲಿಂಗಾಯತ ಧರ್ಮ".

ವೀರಶೈವ ಎಂಬುದು ಶೈವದ ಒಂದು ಪಂಥ. ಭಾರತದಲ್ಲಿ ಶೈವ ಮತ್ತು ವೈಷ್ಣವ ಎಂಬ ಎರಡು ಪ್ರಮುಖ ಧಾರ್ಮಿಕ ವಾಹಿನಿಗಳಿವೆ. ಶಿವನ ಆರಾಧಕರು ಶೈವರು, ವಿಷ್ಣುವಿನ ಆರಾಧಕರು ವೈಷ್ಣವರು. ಇವೆರಡೂ ಸೇರಿ ಇಂದು 'ಹಿಂದೂ' ಆಗಿದೆ. ಶೈವದಲ್ಲಿ 7 ಪ್ರಭೇದಗಳಿವೆ. ಆ ಸಪ್ತಶೈವಗಳಲ್ಲಿ ವೀರಶೈವ ಒಂದು ಪಂಥ. ಶೈವ ಹಾಗೂ ವೈಷ್ಣವರು ವೇದ, ಆಗಮ, ಪುರಾಣ, ಶಾಸ್ತ್ರಗಳನ್ನು ಒಪ್ಪುತ್ತಾರೆ. ಆದರೆ ಬಸವ ಪ್ರಣೀತ ಲಿಂಗಾಯತ ಧರ್ಮವು ವೇದಗಳನ್ನು ಖಂಡಿಸಿದೆ.

ವೇದಗಳಿಗೆ ವರೆಯ ಕಟ್ಟುವೆ
ಶಾಸ್ತ್ರಕ್ಕೆ ನಿಗಳವನಿಕ್ಕುವೆ
ಆಗಮದ ಮೂಗ ಕೊಯ್ಯುವೆ
ತರ್ಕದ ಬೆನ್ನಬಾರನೆತ್ತುವೆ ಎಂದು

ವಿಶ್ವಗುರು ಬಸವಣ್ಣವರು ಸಾರಿ ಸಮಾನತೆ ಸಾರುವ ವಚನ ಸಾಹಿತ್ಯದ ತಳಹದಿಯ ಮೇಲೆ ಅವೈದಿಕವಾದ ಹೊಸ ಧರ್ಮವನ್ನು ಕೊಟ್ಟರು. ಅದುವೆ ಪ್ರಗತಿಪರ ಲಿಂಗಾಯತ ಧರ್ಮ.

ವೀರಶೈವರು ತಮಿಳುನಾಡು, ಕೇರಳ ಮತ್ತು ಪಾಂಡಿಚೇರಿಯ ಕೆಲವು ಭಾಗಗಳಲ್ಲಿ ಇದ್ದಾರೆ. ಕರ್ನಾಟಕದಲ್ಲಿ ಯಾರೂ ವೀರಶೈವರಿಲ್ಲ. ಕೆಲವು ಲಿಂಗಾಯತರೆ ತಮ್ಮನ್ನು ತಾವು ವೀರಶೈವ ಎಂದು ಕರೆದುಕೊಂಡು ಧರ್ಮಕ್ಕೆ ದ್ರೋಹ ಬಗೆಯುತ್ತಿದ್ದಾರೆ. ನಾವು ಈಗಾಗಲೆ 1997 ರಲ್ಲಿ, 2005 ಮತ್ತು 2013 ರಲ್ಲಿ ಕೇಂದ್ರ ಸರ್ಕಾರಕ್ಕೆ ಮನವಿ ಕೊಟ್ಟಿದ್ದೇವೆ. ಮೂರು ಬಾರಿ ಬೃಹತ್ ಆಂದೋಲನವನ್ನು ಮಾಡಿದ್ದೇವೆ.

ಒಂದು ಧರ್ಮವು ಯಾವ ರಾಜ್ಯದಲ್ಲಿ ಸ್ಥಾಪನೆಯಾಗಿದೆಯೋ ಮತ್ತು ಎಲ್ಲಿ ಹೆಚ್ಚು ಅನುಯಾಯಿಗಳನ್ನು ಹೊಂದಿರುತ್ತದೆಯೋ ಆ ರಾಜ್ಯ ಸರ್ಕಾರದಿಂದ ಶಿಫಾರಸು ಅಗತ್ಯವಾಗಿರುತ್ತದೆ. ಆದ್ದರಿಂದ ಗುರು ಬಸವಣ್ಣನವರ ತತ್ವಗಳಲ್ಲಿ ಅಪಾರವಾದ ನಂಬಿಕೆ ಹೊಂದಿರುವ ತಾವು ಈ ಅವೈದಿಕವಾದ ಮತ್ತು ಸ್ವತಂತ್ರವಾದ ಲಿಂಗಾಯತ ಧರ್ಮಕ್ಕೆ ಸಾಂವಿಧಾನಕ ಮಾನ್ಯತೆಗಾಗಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕೆಂದು ವಿನಂತಿಸುತ್ತೇವೆ.

ವೀರಶೈವರ ಅರ್ಜಿ ಕೇಂದ್ರ ಸರ್ಕಾರದಿಂದ ತಿರಸ್ಕೃತಗೊಂಡಿದೆ

ಅಖಿಲ ಭಾರತ ವೀರಶೈವ ಮಹಾಸಭಾದವರು ಭಾರತ ಸರ್ಕಾರಕ್ಕೆ ಈಗಾಗಲೆ ಮನವಿ ಸಲ್ಲಿಸಿ ವೀರಶೈವ-ಲಿಂಗಾಯತ ಧರ್ಮಕ್ಕೆ ಮಾನ್ಯತೆ ನೀಡಬೇಕೆಂದು ಕೋರಿದ್ದರು. ಆದರೆ ಅವರ ಅರ್ಜಿಯು ತಿರಸ್ಕೃತಗೊಂಡಿದೆ. ತಮಿಳುನಾಡು ಉಚ್ಚ ನ್ಯಾಯಾಲವು ಈ ಕುರಿತು ತೀರ್ಪು ನೀಡಿದೆ.

ವೀರಶೈವ ಪದವನ್ನು ಲಿಂಗಾಯತಕ್ಕೆ ಪರ್ಯಾಯವಾಗಿ ಬಳಸುವದರಿಂದ ಮಾನ್ಯತೆ ಸಿಗಲು ಸಾಧ್ಯವಿಲ್ಲ, ಏಕೆಂದರೆ ವೀರಶೈವವು ವೈದಿಕ ಆಚರಣೆಯ ಒಂದು ಪಂಥ. ಆದರೆ ಲಿಂಗಾಯತವು ಒಂದು ಸ್ವತಂತ್ರ, ಪರಿಪೂರ್ಣ ಧರ್ಮ. ತಾವು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವಾಗ ಕೇವಲ ಲಿಂಗಾಯತ ಧರ್ಮಕ್ಕೆ ಸಾಂವಿಧಾನಕ ಮಾನ್ಯತೆ ನೀಡುವಂತೆ ಆಗ್ರಹಿಸಬೇಕೆಂದು ಕೋರುತ್ತೇವೆ.

ಜೈನ, ಬೌದ್ಧ, ಸಿಖ್, ಇಸ್ಲಾಂ, ಕ್ರೈಸ್ತ ಧರ್ಮ ಗಳಂತೆ ಲಿಂಗಾಯತ ಧರ್ಮಕ್ಕೂ ಸ್ವತಂತ್ರ ಧರ್ಮದ ಮಾನ್ಯತೆ ಸಿಗಲೇಬೇಕು. ಯಾವ ಕಾರಣಕ್ಕಾಗಿ ಜೈನ, ಬೌದ್ಧ, ಸಿಖ್, ಇಸ್ಲಾಂ ಮತ್ತು ಕ್ರೈಸ್ತ ಧರ್ಮಕ್ಕೆ ಮಾನ್ಯತೆ ಕೊಡಲಾಗಿದೆಯೋ ಆ ಎಲ್ಲ ಲಕ್ಷಣಗಳು ಲಿಂಗಾಯತ ಧರ್ಮಕ್ಕಿವೆ. ಆದ್ದರಿಂದ ತಾವು ಕೇಂದ್ರ ಸರ್ಕಾರಕ್ಕೆ ಈ ಕುರಿತು ಶಿಫಾರಸು ಮಾಡುವುದಲ್ಲದೆ, ಗುರು ಬಸವಣ್ಣವರ ಅನುಯಾಯಿಗಳಾಗಿ ಭಾರತ ಸರ್ಕಾರ ಮನವರಿಕೆ ಮಾಡಿ ಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ವಿನಂತಿಸುತ್ತೇವೆ.

ರಾಷ್ಟ್ರೀಯ ಬಸವ ದಳಗಳು ನಿಭಾಯಿಸಬೇಕಾದ ಜವಾಬ್ದಾರಿಗಳು

ದಿನಾಂಕ 17.6.2017 ರಂದು ಪೂಜ್ಯ ಮಾತಾಜಿಯವರ ಆದೇಶದಂತೆ ಚನ್ನಬಸವನಂದಾ ಸ್ವಾಮೀಜಿಯವರ ದಿವ್ಯನೇತೃತ್ವದಲ್ಲಿ ಬೆಂಗಳೂರಿನ ಬಸವ ಗಂಗೋತ್ರಿ ಆಶ್ರಮದಲ್ಲಿ ರಾಜ್ಯ ಮತ್ತು ಕೇಂದ್ರ ಸಮಿತಿಯ ಸಮಾವೇಶವನ್ನು ಕರೆಯಲಾಗಿತ್ತು, ಈ ಸಮಾವೇಶದಲ್ಲಿ ತೆಲಂಗಾಣ, ಆಂಧ್ರಪ್ರದೇಶ, ಮಹಾರಾಷ್ಟ್ರದ ಎಲ್ಲಾ ರಾಷ್ಟ್ರೀಯ ಬಸವದಳ ಪಧಾದಿಕಾರಿಗಳ ಸಮುಕ್ಷಮದಲ್ಲಿ ಈ ಕೆಳಗಿನ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ. ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವದಳ ಸೇರಿದಂತೆ ಸಂಬಂಧಪಟ್ಟ ಎಲ್ಲಾ ರಾಜ್ಯ ರಾಷ್ಟ್ರೀಯ ಬಸವ ದಳ ಪಧಾದಿಕಾರಿಗಳು ಸೇರಿ ಈ ನಿರ್ಣಯಗಳನ್ನು ಅಂಗೀಕರಿಸಲಾಗಿದೆ. ತ್ವರಿತವಾಗಿ ಎಲ್ಲ ರಾಷ್ಟ್ರೀಯ ಬಸವದಳಗಳು ಕಾರ್ಯ ರೂಪಕ್ಕೆ ತರುವುದಲ್ಲದೆ ವರಿದಿಯನ್ನು ಕೂಡ ಕೇಂದ್ರ ಸಮಿತಿಗೆ ಕಳುಹಿಸಬೇಕು.

1. ರಾಷ್ಟ್ರೀಯ ಬಸವ ದಳಗಳ ಅಧಿಕೃತ ನೊಂದಣಿ ಕಡ್ಡಾಯ.
2. ಜಿಲ್ಲೆ ಮತ್ತು ತಾಲ್ಲೂಕ ಒಕ್ಕೂಟ ಒಂದು ತಿಂಗಳೊಳಗಾಗಿ ರಚಿಸುವುದು.
3. ನೂತನ ಕಮಿಟಿ ಅಗತ್ಯವಿದ್ದಲ್ಲಿ 60 ಭಾಗ ಯುವಕರಿಗೆ ಅವಕಾಶ ಕೊಡುವುದಲ್ಲದೇ ಶರಣೆಯರಿಗೆ ಒತ್ತು ಕೊಡುವುದು.
4. ಪ್ರತಿ ಜಿಲ್ಲೆಗಳಲ್ಲಿ ನಾಲ್ಕು ಜನ ಯುವಕರನ್ನು ರಾಜ್ಯ ಸಮಿತಿಗೆ ಆಯ್ಕೆ ಮಾಡುವುದು.
5. ರಾಷ್ಟ್ರೀಯ ಬಸವ ದಳಗಳ ನಾಮ ಫಲಕಗಳನ್ನು ಆಯಾ ಘಟಕಗಳ ಊರಿನ ಆಯಕಟ್ಟಿನ ಭಾಗಗಳಲ್ಲಿ ಪ್ರತಿಷ್ಠಾಪಿಸುವುದು.
6. ವಚನಗಳ ಸಾಲಿನ ಅಂಟು ಚೀಟಿಗಳನ್ನು ಅಂಟಿಸುವುದು

ಉದಾಹರಣೆ :- 1. ಕಾಯಕವೇ ಕೈಲಾಸ, ವಿಶ್ವಗುರು ಬಸವಣ್ಣನವರು, ರಾಷ್ಟ್ರೀಯ ಬಸವ ದಳ, ದಾಸೋಹವೇ ದೇವಧಾಮ, ವಿಶ್ವಗುರು ಬಸವಣ್ಣನವರು, ರಾಷ್ಟ್ರೀಯ ಬಸವ ದಳ ಎಂದು 4x8 ಇಂಚಿನ ಅಂಟು ಚೀಟಿಗಳನ್ನು ಅಂಗಡಿ ಮತ್ತು ವಾಹನಗಳಿಗೆ ಹಾಗೂ ಪ್ರಸಾದದ ನೀತಿ ಫಲಕಗಳು ದಾಸೋಹ ಮಂದಿರಗಳಲ್ಲಿ ಹಾಕುವುದು.

7. ಸಾಧಕರು ಮತ್ತು ತ್ಯಾಗಿಗಳಿಗೆ ಆಯಾ ಜಿಲ್ಲೆಗಳಲ್ಲೇ (ಗೌರವ) ಸನ್ಮಾನ ಮಾಡುವುದು.
8. ಧರ್ಮ ಪ್ರಚಾರವಾಗಬೇಕಾದರೆ ಬಸವ ಧರ್ಮ ಸಂಸ್ಕಾರಗಳ ಅಳವಡಿಕೆ ಮತ್ತು ಪ್ರಕಾರ ನಾಮಕರಣ, ವಿವಾಹ, ಸೀಮಂತ ಮತ್ತು ಲಿಂಗೈಕ್ಯ ಸಂಸ್ಕಾರ ಇವುಗಳಲ್ಲಿ ರಾಷ್ಟ್ರೀಯ ಬಸವ ದಳಗಳು ಕಡ್ಡಾಯವಾಗಿ ಆಮಂತ್ರಣವಿಲ್ಲದಿದ್ದರೂ ಭಾಗವಹಿಸಬೇಕು.

9. ಶರಣರ ಜೀವನ ಚರಿತ್ರೆಯ ಕಿರುಗ್ರಂಥಗಳನ್ನು ಮುದ್ರಿಸಿ ಶಾಲೆಯ ಮಕ್ಕಳಿಗೆ ಹಂಚುವುದಲ್ಲದೆ, ಶಾಲೆಗಳಿಗೆ ಭೇಟಿ ನೀಡಿ ಬಸವಾದಿ ಪ್ರಮಥರ ವಿಚಾರ ಧಾರೆಯನ್ನು ತಿಳಿಸುವುದು.
10. ಬಡ ವಿದ್ಯಾರ್ಥಿಗಳನ್ನು ದತ್ತು ತೆಗೆದುಕೊಳ್ಳುವುದು. ಅಂದರೆ ಒಂದು ವರ್ಷದಲ್ಲಿ ಒಬ್ಬ ವಿದ್ಯಾರ್ಥಿಗಾದರೂ ಪೂರ್ಣ ಪ್ರಮಾಣದ ಸಹಾಯ ಮಾಡುವುದು.
11. ಪ್ರತಿ ವರ್ಷ ವಾರ್ಷಿಕ ವರದಿಯನ್ನು ರಾಜ್ಯ ಅಥವಾ ಕೇಂದ್ರ ಸಮಿತಿಗಳಿಗೆ ಕಡ್ಡಾಯವಾಗಿ ತಲುಪಿಸುವುದು.
12. ವರ್ಷದ 52 ವಾರಗಳಲ್ಲಿ ಒಂದು ವಾರವು ತಪ್ಪದೆ ಬಿಳಿ ವಸ್ತ್ರ ಹಾಗೂ ಸ್ಕಾರ್ಫ ಧರಿಸಿ ಪ್ರಾರ್ಥನೆಗೆ ಬರುವ ಸಂಕಲ್ಪ ಮಾಡುವುದು. 52 ವಾರವು ತಪ್ಪದೆ ಪ್ರಾರ್ಥನೆಗೆ ಬಂದವರನ್ನು ಸನ್ಮಾನಿಸುವುದು.
13. ಧರ್ಮ ಪೀಠದ ಆದೇಶಗಳನ್ನು ತಪ್ಪದೆ ಪಾಲಿಸಿ ಧರ್ಮ ಮತ್ತು ಸಮಾಜಕ್ಕಾಗಿ ಷಡಂಗ ದಾಸೋಹಿಗಳಾಗಿ ತಮ್ಮನ್ನು ತಾವು ಅರ್ಪಿಸಿಕೊಂಡು ಮುಂದಿನ ಸಮಾಜಕ್ಕೆ (ಪೀಳಿಗೆಗೆ) ಮಾರ್ಗದರ್ಶಿಗಳಾಗಬೇಕೆಂದು ರಾಜ್ಯ ರಾಷ್ಟ್ರೀಯ ಬಸವ ದಳ ಹಾಗೂ ಕೇಂದ್ರ ಸಮಿತಿ ಇಚ್ಛಿಸಿದ್ದು ಪರವ ಪೂಜ್ಯ ಮಾತಾಜಿಯವರ ಅನುಮೋದನೆ ಪಡೆದಿರುತ್ತಾರೆ.

ಪೂಜ್ಯ ಚನ್ನಬಸವಾನಂದ ಸ್ವಾಮೀಜಿ
ಪೀಠಾಧ್ಯಕ್ಷರು,
ಚಿನ್ಮಯಜ್ಞಾನಿ ಚನ್ನಬಸವೇಶ್ವರ ಜ್ಞಾನ ಪೀಠ

ಕೂಡಲ ಸಂಗಮದಲ್ಲಿ ಜುಲೈ 12ರಂದು ಬಸವ ಭಾರತಿ ಶಾಲಾ ಕಟ್ಟಡ ಉದ್ಘಾಟನೆ

ದಾನಿಗಳ ನೆರವಿನಿಂದ ಕೂಡಲ ಸಂಗಮದ ಮಹಾಮನೆ ಮಹಾಮಠದ ಆವರಣದಲ್ಲಿ ನಿರ್ಮಾಣವಾದ ಬಸವ ಭಾರತಿ ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆ, ಪದವಿಪೂರ್ವ ಕಾಲೇಜಿನ ಭವ್ಯ ಕಟ್ಟಡವು ದಿ.12-07-2017ರಂದು ಬೆಳಿಗ್ಗೆ 10-30ಕ್ಕೆ ಉದ್ಘಾಟನೆಯಾಗಲಿದೆ. ಪೂಜ್ಯ ಶ್ರೀಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಅನೇಕ ಗಣ್ಯರು ಭಾಗವಹಿಸಲಿದ್ದಾರೆ. ದಾನಿಗಳಿಗೆ ಸತ್ಕಾರವಿದೆ. ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳು ಭಾಗವಹಿಸಬೇಕೆಂದು ಕೋರುತ್ತೇವೆ.

ಪೂಜ್ಯ ಶ್ರೀ ಸದ್ಗುರು ಮಾದೇಶ್ವರ ಸ್ವಾಮಿಗಳು
ಬಸವ ಧರ್ಮ ಪೀಠ, ಕೂಡಲ ಸಂಗಮ

ಪರಮ ಪೂಜ್ಯ ಲಿಂಗಾನಂದ ಅಪ್ಪಾಜಿಯವರ ಚರಿತೆ

- ಮಹಾದೇವ ಗುಡೇರ್

ಪರಮ ಪೂಜ್ಯ ಗುರು ಲಿಂಗಾನಂದರ
ಕೇಳಿರಿ ಪಾವನ ಚರಿತೆಯನಾ
ವೆಸನ ಕಳೆದು ಬದುಕು ಹಸನುಗೊಳಿಸಿದ
ಪುಣ್ಯ ಪುರುಷರ ಸ್ಮರಣೆಯನಾ ॥ 1 ॥

ಬಸವ ಧರ್ಮ ಬಸವಳಿದ ನಿಂತಿರಲು
ವಸುಧೆಯೊಳಗೆ ಅದತರಿಸಿದರು
ಸತ್ಯ ಶರಣರ ಸಂದೇಶವನ್ನು ಬಿತ್ತರಿಸಿ
ಈ ಜಗದಿ ಬಿತ್ತಿ ಬೆಳಸಿದವರು ॥ 2 ॥

ಮನಗೊಳಿಪುರದಿ ಕಪ್ಪದ ಮನೆತನದಿ
ಮಲ್ಲಪ್ಪನವರಿಗೆ ಮಗುವಾಗಿ
ಮಹಾನ್ ಸಾಧ್ವಿ ಕಲ್ಲಮ್ಮನವರ ಉದರದಿ
ಜನಿಸಿ ಬಂದಿರಿ ಶಿಶುವಾಗಿ ॥ 3 ॥

ಬಂದು ಬಳಗ ಹಂದರದಿ ಬಳ್ಳಿಯಲಿ
ಮಂದಾರ ಕುಸುಮದಂತೆ ಅರಳಿದರು
ಕಿರಿಯ ವಯಸ್ಸಿನ ಇವರ ಹಿರಿಯ ಮಹಿಮೆ ಕಂಡು
ಜಗದ ಜನತೆ ಬೆರಗಾಗಿಹರು ॥ 4 ॥

ಮನಗೊಳಿ ಹಂಚಿನಾಳ ಗ್ರಾಮದಲ್ಲಿ
ಪ್ರಾಥಮಿಕ ಶಿಕ್ಷಣ ಕಲಿತಿಹರು
ಬಿಜಾಪೂರ ಬಾಗಲಕೋಟೆಯೊಳಗೆ
ಮಾಧ್ಯಮಿಕ ಶಿಕ್ಷಣ ಮುಗಿಸಿದರು ॥ 5 ॥

ಸಂಪ್ರದಾಯದ ಸುಳಿಗೆ ಸಿಲುಕಿ ತಂದೆ
ವ್ಯಾಪದಲ್ಲಿ ಸೋಲನು ಕಂಡಿಹರು
ಮೂಢನಂಬಿಕೆ ಮುಗ್ಧ ಭಕ್ತಿಯ ಕಂಡು
ಸಂಗಮೇಶ ಬಲೂ ನೊಂದಿಹರು ॥ 6 ॥

ಬಯಲು ಭೂಮಿ ಬರಗಾಲ ನಾಡಿನಲ್ಲಿ
ಉರಿಯುವ ಬಡತನ ಕಂಡಿಹರು
ಬರಡು ಬಾಳಿನ ಕಡಿ ಬೇವಿನ ರಸ
ಬಾಲ್ಯದಲ್ಲಿ ನಂಜು ಉಂಡಿಹರು ॥ 7 ॥

ಬಡತನದ ಭವಣೆ ದಹಿಸುತ್ತಲಿರಲು
ಎದೆಗುಂದದೇ ಮುಂದಕೆ ಸಾಗಿದರು
ಬೆಳಗಾವಿಗೆ ಬಂದು ಲಿಂಗರಾಜ ಕಾಲೇಜ್‌ದಲ್ಲಿ
ಪ್ರವೇಶವನ್ನು ಪಡೆದಿಹರು ॥ 8 ॥

ಹುಟ್ಟು ಹೋರಾಟದ ದಿಟ್ಟತನದಲ್ಲಿ
ಪುಟವಿಟ್ಟ ಚಿನ್ನದಂತೆ ಹೊಳೆದಿಹರು ।
ಮನೆಪಾಠ ಹೇಳುತ್ತ ವಾರದನ್ನ ಉಂಡು
ಬಿ.ಎ ಪದವಿಯನು ಮುಗಿಸಿದರು ॥ 9 ॥

ಸ್ವಾತಂತ್ರ್ಯ ಹೋರಾಟದ ಸಂಗ್ರಾಮದೊಳಗೆ
ಸಕ್ರೀಯ ಪಾತ್ರವನ್ನು ವಹಿಸಿದರು
ಬ್ರಿಟೀಷರ ಕೆಂಗಣ್ಣಿಗೆ ಗುರಿಯಾದ ಭೂಗತ
ಜನರೊಡನೆ ಗೆಳತನ ಬೆಳಸಿದರು ॥ 10 ॥

ಅಂಧ ಸಮಾಜದ ಅಸಮತೆ ತುಮುಲವು
ಸಂಗಮೇಶನ ತಲೆಯ ಕೆಡಸಿರಲು
ಕಾರ್ಲ್‌ಮಾರ್ಕ್ಸ್‌ನ ಕಮುನಿಜಮ್‌ಕ್ಕೆ ವಾಲಿ
ನಾಸ್ತಿಕತೆಯ ನಾಥ ಬೆಳೆದಿರಲು ॥ 11 ॥

ಪ್ರೋ॥ ರಾಜಗೋಪಾಲ ಉಪನ್ಯಾಸವನ್ನು ಕೇಳಿ
ನಾಸ್ತಿಕತೆಯ ನಾದವು ಅಡಗಿರಲು
ಆಸ್ತಿಕತೆಗೆ ಪರಿವರ್ತನೆಗೊಂಡ ಸಂಗಮೇಶ
ಚಿಂತನದೊಳಗೆ ತೊಡಗಿರಲು ॥ 12 ॥

ಕಾರ್ಲ್‌ಮಾರ್ಕ್ಸ್‌ನ ರಕ್ತಕ್ರಾಂತಿಯ
ಭಾವತ್ಮಕವಾಗಿಹ ವಿಚಾರವು
ಸಕಲ ಜೀವಾತ್ಮರಿಗೂ ಲೇಸನೇ ಬಯಸಿದ
ಗುರು ಬಸವಣ್ಣನವರ ಆಚಾರವು ॥ 13 ॥

ತೂಗಿನೋಡುತ ಅವಲೋಕಿಸುತ್ತಲಿ
ವಿಚಾರ ಮಗ್ನರಾಗಿ ಕುಳಿತಿರಲು
ಬಸವಣ್ಣನವರ ಭಾವಚಿತ್ರದಲೊಂದು
ಮಹತ್ವದ ಸಂದೇಶವು ಬಂದಿರಲು ॥ 14 ॥

ಎದ್ದೇಳು ಸಂಗಮೇಶ ನಿದ್ದೆಗಣ್ಣು ತೆರೆದು
ಬಿದ್ದಿರುವ ಶಿವಮತವ ಉದ್ದರಿಸು।
ಎಡೆ ಬಿಡದೆ ನಾಡನುದ್ದಕ್ಕು ಸಂಚರಿಸಿ
ಶರಣ ಧರ್ಮವನು ಬಿತ್ತರಿಸಲು ॥ 15 ॥

ನುಡಿಯ ಕೇಳಿ ಗಡಿಬಿಡಿಸಿ ಸಂಗಮೇಶ
ಜಡವಳಿದ ಜಾಗೃತರಾಗಿರಲು ।
ಭಾವಚಿತ್ರದಿಂದ ಹೊರಬಂದ ಬೆಳಕೊಂದು
ಸಂಗಮೇಶನ ಎದೆಯಲ್ಲಿ ಇಳಿದಿರಲು ॥ 16 ॥

ನೊಂದ ಮನದ ಗುರು ಸಂದೇಶದೊಳಗಿನ
ಅಂತರಾಳವನು ಅರಿತಿಹರು ।
ಬದುಕನೇ ಮುಡುಪಿಡುವ ಸಂಕಲ್ಪಗೈದು
ಬಸವಣ್ಣಗೆ ವಾಗ್ದಾನ ನೀಡಿದರು ॥ 17 ॥

ಅಂದಿನಿಂದಲೇ ವಚನ ಸಾಹಿತ್ಯದ
ಸಾಗರದಾಳಕೆ ಧುಮುಕಿದರು ।
ಬಸವ ತತ್ವವನು ಪ್ರಚಲಿತಗೊಳಿಸಲು
ಸರ್ವ ಸನ್ನದ್ಧತೆ ನಡೆಸಿದರು ॥ 18 ॥

ಮನೆತನದ ಬಡತನ ಉಲ್ಬಣಗೊಂಡಿಹ
ಸಂಗತಿಯೊಂದು ತಿಳಿದಿರಲು ।
ತ್ವರಿತಗತಿಯಲ್ಲಿ ಊರಿಗೆ ಸಾಗಿಬಂದು
ಶಿಕ್ಷಕ ವೃತ್ತಿಗೆ ಸೇರಿದರು॥ ॥ 19 ॥

ಬಂದ ಬಡತನದ ಬಳವಳಿಯನು
ಒಂದು ಸವಾಲಾಗಿ ಸ್ವೀಕರಿಸಿದರು ।
ನೊಂದಿಕೊಳ್ಳದೇ ಅದಕ್ಕೊಂದಿಕೊಳ್ಳುತಲಿ
ಶರಣ ಪಥದಲ್ಲಿ ಸಾಗಿದಿರಿ ॥ ॥ 20 ॥

ಜ್ಞಾನಯೋಗಾಶ್ರಮದ ಪೂಜ್ಯ ಮಲ್ಲಿಕಾರ್ಜುನರಿಂದ
ಲಿಂಗದೀಕ್ಷೆಯನು ಪಡೆದಿಹರು।
ಮಾಯೆಯಾಟ ಸಂಸಾರವಿದೆನ್ನುತಲಿ
ಸಾತ್ವಿಕರ ಸೂತ್ರವನು ಹಿಡಿದಿಹರು ॥ ॥ 21 ॥

ಉಚ್ಚಶಿಕ್ಷಣದ ಉತ್ಕಟ ಹಂಬಲದ
ಅಭಿಲ್ಲಾಷೆಯು ಗರಿಗೆದರಿರಲು ।
ಶಿಕ್ಷಕ ವೃತ್ತಿಗೆ ಶರಣು ಹೊಡೆಯುತಲಿ
ಧಾರವಾಡಕೆ ಬಂದು ನೆಲಸಿರಲು ॥ ॥ 22 ॥

ಕರ್ನಾಟಕ ವಿಶ್ವವಿದ್ಯಾಲಯದೊಳಗಡೆ
ಪ್ರವೇಶವನು ಪಡೆದಿಹರು ।
ತತ್ವಜ್ಞಾನ ವಿಷಯ ಆಯ್ದುಕೊಂಡು
ಅಧ್ಯಾಯನದಲ್ಲಿ ತೊಡಗಿದರು ॥ ॥ 23 ॥

ಸಹಪಾಟಿಗಳೊಂದಿಗೆ ವಿಷಯ ವಿಮರ್ಶೆಗೆ
ಚರ್ಚಾಗೋಷ್ಠಿಯನ್ನು ನಡಿಸುವರು
ವಚನ ಸಾಹಿತ್ಯದ ಬಸವಣ್ಣರ ನಿಲುವಿಗೆ
ಸಮರ್ಥಿಸಿ ಗೆಲುವನು ಪಡೆಯುವರು ॥ 24 ॥

ನವಕಲ್ಯಾಣ ಮಠದ ಶ್ರೀ ಕುಮಾರಸ್ವಾಮಿಗಳ
ಸಂಪರ್ಕದ ಸೌಭಾಗ್ಯ ದೊರೆತಿರಲು ।
ಪ್ರಖ್ಯಾತರೆನಿಸಿದ ಅವರ ವ್ಯಾಖ್ಯಾನವನು ಕೇಳಿ
ವೈರಾಗ್ಯದೆಡೆಗೆ ಮನವಾಲಿರಲು ॥ 25 ॥

ಅಂತರಾಳದ ತಂತಿ ಮಿಡಿಯುತ್ತಿತ್ತು
ವಚನ ವಾಙ್ಮಯದ ನಾದವನು ।
ಎದೆಯ ಗೂಡಿನಲಿ ಮನದ ಕೋಗಿಲೆಯು
ಉಲಿಯಿತು ಶರಣ ಬೋಧೆಯನು ॥ 26 ॥

ಮನದಾಳದಲ್ಲಿ ಮನೆ ಮಾಡಿಕೊಂಡಿತು
ಬಸವ ಸಂದೇಶದ ನುಡಿಯೊಂದು ।
ಗುರುವಿಗೆ ನೀಡಿದ ವಾಗ್ದಾನ ಪೂರೈಸಲು
ಚಡಪಡಿಸಿತು ಮನ ನಡಿಯಂದು ॥ 27 ॥

ದೃಢ ಸಂಕಲ್ಪದಿ ಎದ್ದು ಪ್ರಾಥಃಕಾಲ ಸಮಯದಿ
ಹೊರವಲಯಕ್ಕೆ ಸಾಗಿ ಬಂದಿಹರು ।
ಹೊಳೆವ ದಿನಮಣಿಯ ಹೊಂಬೆಳಕಿನ ದೀವಿಗೆ
ನಿಸರ್ಗವೇ ಸಾಕ್ಷಿಯು ಎಂದಿಹರು ॥ 28 ॥

(ಮುಂದುವರಿಯುವುದು)

ಕಲ್ಯಾಣ ಕಿರಣ ಓದುಗರಿಗೆ ಸೂಚನೆ

ಚಂದಾ ಅವಧಿ ಮುಗಿದವರಿಗೆ ಸೂಚನೆ ಕಳಿಸಲಾಗುವುದು. ತಕ್ಷಣ ಹಣ ಕಳಿಸಿರಿ, ನವೀಕರಿಸಿರಿ. ನಿಮ್ಮ ಮೊಬೈಲ್ ಸಂಖ್ಯೆ ಮರೆಯದೆ ತಿಳಿಸಿರಿ.

ವಿ.ಸೂ: ಚಂದಾ ಕಳಿಸಲು ಅನುಕೂಲ ಇಲ್ಲದವರು ಫೋನ್ ಮೂಲಕ ಪತ್ರಿಕೆ ಕಳಿಸಲು ತಿಳಿಸಿರಿ. ಶರಣ ಮೇಳ (ಕಲ್ಯಾಣ ಪರ್ವ)ದಲ್ಲಿ ಚಂದಾ ಹಣವನ್ನು ಪ್ರಾಮಾಣಿಕವಾಗಿ ಕಟ್ಟಿರಿ.

ಸಂಪರ್ಕಿಸುವ ದೂರವಾಣಿ: 9945806297

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ನಡೆಸುತ್ತಿರುವ
ಅನಾಥಾಲಯಗಳಿಗೆ ಪ್ರವೇಶಾವಕಾಶ

1. ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಬಸವ ಗಂಗೋತ್ರಿ ಅನಾಥಾಲಯ.
   ಸಂಪರ್ಕಿಸಬೇಕಾದವರು : ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
   9845399698 / 9448386717
   ಬಾಲಕರಿಗೆ 7ನೆಯ ತರಗತಿಯವರೆಗೆ ಮಾತ್ರ
   ಬಾಲಕಿಯರಿಗೆ ಒಂದರಿಂದ ಹತ್ತನೆಯ ತರಗತಿಯವರೆಗೆ.
2. ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ ಅಕ್ಕಮಹಾದೇವಿ ಅನಾಥಾಲಯ
   ಸಂಪರ್ಕಿಸಬೇಕಾದವರು : ಶರಣೆ. ಸುಗುಣ
   ಬಾಲಕರಿಗೆ ಒಂದರಿಂದ ಏಳು
   ಬಾಲಕಿಯರಿಗೆ ಒಂದರಿಂದ ಹತ್ತನೆ ತರಗತಿಯವರೆಗೆ.
3. ಕೂಡಲಸಂಗಮದಲ್ಲಿ ಬಸವ ಕೃಪಾ ಅನಾಥಾಲಯ.
   ಸಂಪರ್ಕಿಸಬೇಕಾದವರು : ಪೂಜ್ಯ ಶ್ರೀ ಸದ್ಗುರು ಮಾದೇಶ್ವರ ಸ್ವಾಮಿಗಳು
   9483748266
   ಬಾಲಕರಿಗೆ ಮಾತ್ರ ; ಒಂದರಿಂದ ಹತ್ತನೆ ತರಗತಿಯವರೆಗೆ.
4. ಬಸವ ಕಲ್ಯಾಣದಲ್ಲಿ ಅಕ್ಕನಾಗಲಾಂಬಿಕಾ ಅನಾಥಾಲಯ
   ಸಂಪರ್ಕಿಸಬೇಕಾದವರು : ಪೂಜ್ಯ ಶ್ರೀ ಸದ್ಗುರು ಬಸವ ಪ್ರಭು ಸ್ವಾಮಿಗಳು
   9480497346
   ಬಾಲಕ-ಬಾಲಕಿಯರಿಬ್ಬರಿಗೂ ಒಂದನೆಯ ತರಗತಿಯಿಂದ 10ನೆಯ ತರಗತಿಯವರೆಗೆ ಪ್ರವೇಶಾವಕಾಶ.
5. ಮುಕ್ತಾಯಕ್ಕ ಮ್ಯಾಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯ, ಬಸವ ಕಲ್ಯಾಣ
   5ನೆಯ ತರಗತಿಯಿಂದ 10ನೆಯ ತರಗತಿಯವರೆಗೆ, ಬಾಲಕಿಯರಿಗೆ ಮಾತ್ರ.
   ಪೂಜ್ಯ ಶ್ರೀ ಸದ್ಗುರು ಬಸವ ಪ್ರಭು ಸ್ವಾಮಿಗಳು : **9480497346**
6. ಕಲ್ಯಾಣಮ್ಮ (ಅನಾಥಾಲಯ) ನಿರ್ಗತಿಕ ಮಕ್ಕಳ ಕುಟೀರ. ಬೀದರ ಬಸವ ಮಂಟಪ.
   ಕೇವಲ ಬಾಲಕಿಯರು. ಒಂದನೆಯ ತರಗತಿಯಿಂದ ಹತ್ತನೆಯ ತರಗತಿಯವರೆಗೆ,
   ಪೂಜ್ಯ ಶ್ರೀ ಮಾತೆ ಸತ್ಯಾದೇವಿ :
7. ನೀಲಾಂಬಿಕಾ ಮ್ಯಾಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯ, ಬೀದರ ಬಸವ ಮಂಟಪದಲ್ಲಿ 5ನೆಯ ತರಗತಿಯಿಂದ 10ನೆಯ ತರಗತಿಯವರೆಗೆ.
8. ಅಕ್ಕನಾಗಲಾಂಬಿಕಾ ನಿರ್ಗತಿಕ ಮಕ್ಕಳ ಕುಟೀರ
   ಬಸವ ಧರ್ಮ ಪೀಠ, ಬಸವ ಮಹಾಮನೆ, ಮುಖ್ಯರಸ್ತೆ
   ಬಸವ ಕಲ್ಯಾಣ, ಬೀದರ್ ಜಿಲ್ಲೆ
   ಪೂಜ್ಯ ಶ್ರೀ ಸದ್ಗುರು ಬಸವ ಪ್ರಭು ಸ್ವಾಮಿಗಳು : **9480497346**

ಬಸವೋತ್ಸವದ ಸಿಹಿ ಕ್ಷಣಗಳು







July Sanchike Published on 03-07-2017
Name of the Printer - Riplic Printers, Bengalure-560010
Registered with Registrar of News Papers in India, New Delhi No.19988/70
Postal Registration (SSP os BG-West Dn)No.KA/BGW-50/2015-17,wpp-17
Licenced to Post the Printed Magazine without Prepayment (WPP-17). Posted at Bengalure PSO,
Mysuru Road, (Bg-560026) on 3rd, 5th, 10th, 20th of every month, Pages 32+4